5 T.F., 1st Class, 2nd Class or Mysore Scout
6 No. of Troop meetings attended
7 Number of Proficiency badges held
8 Remarks

Warrants issued and renewed during February 1938.

Bangalore District.

Brothers—

1	G C Elings, B A,	G S M,	25th Bangalore
2	M S Sampath,	S M,	do
3	K N Krishnaiah,	C M,	do

4 C Seshachar, M A, Asst. District Scout Commr. Kankanahalli Tq., and Development of Scouting in Bangalore City.
5 N Sree Ram, Group Scoutmaster, 15th Bangalore.
6 M R Narayana Singh, Group Scoutmaster 2nd Bangalore.
7 M H Seetaramiah, Cubmaster, Mallasandra.
8 P Sivashankar, B A, LL B, Dist. Scout Commr. Bangalore.
9 Y G Shantharajaiah, Cubmaster, Kumara Pack, Bangalore.
10 T G Ramasastri, Cubmaster, Tubagere.
11 M Ramachar, C M, Magadi.

NEW WARRANTS ISSUED.

1 Sundarasadhu, M A, B T, Asst. Dist. Scout Commr. for Cubs in the Bangalore Municipal Schools.
2 Lieut R V Karve, Asst. Dist. Scout Commr. for Scouting in the Military Area.

K. G. F. District.

Brothers—
1 C R Dharma Raj, A S M, 2nd K. G. F.
2 T R Basavaradhya, A S M, 18th K G F
3 Robert Jacobs, C M, 3rd K. G. F.
4 John M Sarvanam, C M, 19th K. G. F.
5 C V Krishan Murthy, G S M 7th K. G. F.
6 H Srinivasa Murthy S M 18th K. G. F.
7 T Somasundaram, S M, 14th K. G. F.

Shimoga District.

Brothers—
1 K Srinivasa Rao, C M, Thirthahalli
2 G M, S M, Nyamati
3 B Ramachandrachar, S M, Tirthahalli
4 Huchu Rao, C M, Shimoga
5 H Hanumantha Char, C M, Malur (Shimoga)
6 P Veerappa, C M, Hirimalalli
7 S Rama Rao, C M, Tirthahalli
8 H Ananthaiah, C M, Konandur

Hassan District

Brothers—
1 S V Venkataramaiah
2 S K Abdul Gaffar

Kadur District.

1 U D Sripathi Rao, Hon. Asst. Disst. Scout Commr. S M, Tarikere
2 P M Syed Aalum

Mysore District.

1 K R Venkataramaiah, S M, Mandya
2 S V Seetaramaiah, do do

Tumkur District.

1 B Subba Rama Rao, S M, Baragur
2 K Suryanarayana, A S M, do

WARRANTS RENEWED.

1 R Nanjundaiah, S M, Nonvinkere
2 T Chowdaiah, do Ittakadibbanahalli
3 H N Ramachandraiah, S M, Hebbur
4 K C Nagappa, S M, Kunigal
5 S R Srinivasa Rau S M Pavagada
6 Md. Bodroddin C M Sira
7 H Hariyappa S M Chiknaikanhalli
8 N Lakkappa S M Tiptur
9 G Ramaiah S M Amrutur
10 K Srinivasa Rao S M Huliyurdurga
11 N Siddalingappa C M Gubbi
12 S Rama Chetty C M Madhugiri
13 H Lakshamanaiah S M Honnudike
14 S V Varadaraja Iyengar S M Kadaba
15 G N Srikantaiah S M Gubbi
16 P Abbas Beig S M Chiknaikanahalli
17 B Nanjappa S M Nonvingere

Advanced Courses in Cubbing and Scouting.

It is proposed to hold Advanced Courses in Cubbing and Scouting, in the first fortnight of May next, at Adichunchanagiri.

Scouters who have undergone a Preliminary Course and are in active service may

send in their applications for being included in the list of candidates, through their District Scout Commissioners.

A camp fee of Rs. 7 for the Scout Course and Rs. 5 for the Cub Course will be levied.

Detailed instructions regarding the camp and the necessary equipment, will be forwarded to the selected candidates in due course.

H. R. Abdul Gaffar.

An Announcement.

A visit to Ceylon, to study the conditions of Scouting obtaining there and specially to see the Scout Colony, which is a special feature and also to visit the several interesting places of the island has been contemplated by some Scouters.

The party may have to start very likely in the third week of May and the trip is expected to take from 10 to 15 days.

The minimum cost of the trip will come to about Rs. 50 inclusive of boarding, lodging and journey expenses. Such of the Scouters as are desirous of joining, may kindly communicate with the undermentioned for further details.—P. Sivashankar, B.A., B.L., Dist. Scout Commissioner, Bangalore City.

A POEM

Many a man his mind before Muse's altar
burnt,
By labour none so well have her learnt;
Every poet of nature Her in dream dreamt,
But no mortal's view her form meant.

Age to age lives she sung and heard well,
Though none her describe full well;
Strain not to please when she unwilling,
Miss not to tongue when comes loving.

Love accepts she from one and all,
Though I and you not know to call;
All hearts yearn with unfit minds.
But songs of praise sing few minds.

Lay I at her feet with devotions pure,
To beg blessing from her flowing sure,
Though she evades me to ensure.
Cannot I cease till I am more.

Let me love my country's creed
My life, incense to her altar be;
Let me of world-brotherhood sow seed
My aim to scatter peace and love be.

—C. V. Iah, Scoutmaster,
Nelamangala.

ಕೆಲವು ಪ್ರತಿಗಳು ಮಾತ್ರ ಉಳಿದಿವೆ. ತ್ವರೆಮಾಡಿ ತರಿಸಿಕೊಳ್ಳಿ.

ಹಾಡಿನ ಚಿಲುಮೆ

ಶ್ರೀವರ್ಯ ಹೊಯ್ಸಳರಿಂದ ರಚಿಸಲ್ಪಟ್ಟಿದೆ.

ಈ ಚಿಲುಮೆಯಲ್ಲಿ ಉಕ್ಕುತ್ತಿರುವ ಹಾಡುಗಳನ್ನು ಗುಟುಕು ಗುಟುಕಾಗಿ ಕುಡಿದು ಆನಂದಪಡಿರಿ.

ನಾಲ್ಕು ಚಿತ್ರಗಳು—ನಲವತ್ತೆಂಟು ಹಾಡುಗಳು—ಕುಣಿಸಿ ನಗಿಸುವ ಲಾವಣಿಗಳು.

ಕ್ರಯ ೦—೬—೦ ದಪ್ಪಕಾಗದದ ಪ್ರತಿ ೦—೮—೦

The Mysore Scout Co-operative Stores

THE ONLY INSTITUTION FROM WHICH TO GET YOUR SCOUT EQIPMENT

Uniforms, Flags, Whistles, Shoulder Knots and other equipment.

Books, Charts, Photographs and Registers.

Indian Scout Pocket Book	Each	1	0	0
Methods of Early Training	—	1	12	0
Gilcraft Series (Nos. 1 to 16)	—	1	5	0
Produx Calculater	—	3	0	0
ಮರಿಗಳ ಕೂಗು	—	1	0	0
Scouting for Boys in India	—	2	0	0
Wolf Cub Hand Book	—	1	15	0
All-India Boy Scout Diary in English	—	0	5	0
The Mysore Boy Scout Diary in Kannada	—	0	4	0
Law chart in Urdu	—	0	3	0
Law Map in Urdu	—	1	6	0
Wall charts	—	0	4	6
Troop Register big size	—	2	8	0
do small size	—	0	7	0

Other Equipment.

Scout Whistle with Mysore emblem	—	0	6	0
Shoulder Knots for Scouts	—	0	1	6
do Rovers	—	0	2	0
Shoulder Patches for Cubs	—	0	0	7
Scarves—(triangular, in cotton; supplied to order in required colour) from annas 0-4-0	to	0	10	0
Scarves Cotton; Green-square each		0	13	0
do Woollen, Green, triangular	—	1	0	0
do Silk square	—	2	4	0
Woggle(Lacquer, wholesale rate)		0	0	10
Garter tabs, Green or Red	—	0	2	0
Belt, leather	—	1	8	0
Belt, web, from 0-6-6 to	—	0	8	6
Cub and Scout Caps	—	0	4	6
Woollen Khaki Hoses big size I quality	per pair	1	14	0
do II do	—	1	9	6
do III do	—	1	6	0
Cotton Hoses	—	0	7	0
Haversack	each	1	6	0
Water bottle	—	1	10	3
Lanyard	—	0	4	6
Shoulder badges—Troop No. and name to be furnished; supplied to order	per 100	1	0	0
Mysore flag	each	4	6	0
Union jack	—	1	1	0
Troop flag	—	8	12	0
Morse signalling flag with stick complete	—	0	5	3
Semaphore Signalling flags with sticks complete	per pair	0	8	9
First Aid Box small size	each	1	9	0
do big size	—	6	8	0
Triangular Bandages	—	0	3	3
do printed	—	0	10	0
Splints	one set	2	4	0
Scout compass	each	1	8	0
Staves	per 100	15	0	0
Hammer	each	0	15	0
Scout knife, big size with a marlin's spike I quality	—	1	8	0
do II do	—	0	14	6
do small size	—	0	11	0
Scout knife, big size with Tin cutter and marlin's spike	—	1	10	0
Ordinary knife Scout pattern, small size with martin's spike	—	0	11	0
Same as above, nickel plated	—	0	13	0
Scout knife and whistle, a combination, just the thing for a good Scout	—	0	12	6
Ordinary knife, big size, stainless steel blade with cork-screw	—	0	15	0
Ordinary knife, stainless steel blade, small size	—	0	6	9
Swadeshi knife	—	1	6	0
Scissors, best steel	—	0	14	0
Hand Axe American pattern	—	1	1	0
do Gilwell pattern	—	1	1	0
Bill Hook double-edged	—	1	9	0
Chopper	—	1	12	6

Apply to The Secretary,

THE MYSORE SCOUT CO-OPERATIVE STORES. LTD.

Scout Headquarters, Irwin Circle, Bangalore City

BOYS' SECTION

ಹುಡುಗರ ಪ್ರಕರಣ

ಪೆಟ್ರೋಲ್‌ಲೀಡರಿಗೊಂದು ಕಾಗದ.

(ರೋಲ್ಯಾಂಡ್ ಇ. ಫಿಲಿಪ್ಸ್‌ರವರ ಪುಸ್ತಕದ ಅನುವಾದ.)

[ಇದುವರೆಗೆ ರ್ರ್ಯೋಲ್ಯಾಂಡ್ ಇ. ಫಿಲಿಪ್ಸ್‌ರವರ "ಲೆಟರ್ಸ್ ಟು ಎ ಪೆಟ್ರೋಲ್ ಲೀಡರ್" ಎಂಬ ಇಂಗ್ಲೀಷ್ ಪುಸ್ತಕದಲ್ಲಿ "ಸ್ಕೌಟ್ ನಿಯಮಗಳು" ಎಂಬ ಮೊದಲನೆಯ ಭಾಗದ ಅನುವಾದವನ್ನು ಹತ್ತು ಕಾಗದಗಳಲ್ಲಿ ಕನ್ನಡಿಗರ ಉಪಯೋಗಕ್ಕಾಗಿ ಪ್ರಚುರಪಡಿಸಲಾಯಿತು. ಇನ್ನು ಮುಂದೆ ಅನುವಾದಕರು ಎರಡನೆಯ ಭಾಗವಾದ "ಕೋಮಲಪಾದ ಮತ್ತು ಎರಡನೆಯ ದರ್ಜೆಯ ಪರೀಕ್ಷಾಂಶಗಳು" ಎಂಬ ಭಾಗದಲ್ಲಿರುವ ಕಾಗದಗಳ ಅನುವಾದವನ್ನು ಪ್ರತಿ ಸಂಚಿಕೆಯಲ್ಲಿಯೂ ಒಂದೊಂದನ್ನು ಬರೆಯುವವರಾಗಿದ್ದಾರೆ ಸಂ.]

ನನ್ನ ಪ್ರೀತಿಯ ಶ್ಯಾಮೂ,

"ಆದ್ದರಿಂದ ನಿಮಗೆ ಆ ವಿಚಾರದಲ್ಲಿ ಎಲ್ಲವೂ ಈಗ ತಿಳಿಯಿತು" ಎಂದು ನರಿ ಪೆಟ್ರೋಲ್ ಲೀಡರು ಒಂದು ದಿನ ಸಾಯಂಕಾಲ ತನ್ನ ಸ್ಕೌಟುಗಳಿಗೆ ಹೇಳುತ್ತಿದ್ದುದು, ನಾನು "ನರಿಗಳ ಗವಿ"ಗೆ (ಅವರ ಗುಂಪಿನ ಸ್ಥಾನದಲ್ಲಿ ಒಂದು ಮೂಲೆ) ಹೋಗುತ್ತಿರುವಾಗ ನನ್ನ ಕಿವಿಗೆ ಬಿದ್ದಿತು.

"ಯಾವ ವಿಚಾರದಲ್ಲಿ ಎಲ್ಲವೂ ನಿಮಗೆ ಗೊತ್ತಾಗಿರುವುದು" ಎಂದು ನಾನು ಕೇಳಿದೆ.

"ಸ್ಕೌಟ್ ಚಿಹ್ನೆಗಳ ವಿಚಾರ ಸ್ವಾಮಿ" ಎಂದು ಅವರು ಹೇಳಿದರು.

ಅವರಲ್ಲಿ ಒಬ್ಬ ಸ್ಕೌಟು ಕೂಡಲೆ ನೆಲದ ಮೇಲೆ ಕೋಮಲಪಾದನ ಪರೀಕ್ಷಾಂಶದ ಭಾಗವಾದ ನಾಲ್ಕು ಸುಲಭವಾದ ಚಿಹ್ನೆಗಳನ್ನು ಬರೆಯಲು ತೊಡಗಿದನು.

ಈ ಚಿಹ್ನೆಗಳು ಯಾತಕ್ಕೆ ಉಪಯೋಗಿಸಲ್ಪಡುತ್ತವೆಂಬುದನ್ನೂ ಅವನು ಹೇಳಿದನು. ಆದರೆ ಈ ಚಿಹ್ನೆಗಳ ವಿಚಾರದಲ್ಲಿ ಅವನಿಗೆ ತಿಳಿಯದಿದ್ದುದು ಬಹಳವಾಗಿತ್ತು. ಅವನ ಪೆಟ್ರೋಲ್ ಲೀಡರು ಶ್ರಮವಹಿಸಿ ಹೇಳಿಕೊಟ್ಟಿದ್ದರೆ ಅವುಗಳೆಲ್ಲಾ ಅವನಿಗೆ ತಿಳಿಯುತ್ತಿದ್ದವು.

ನೀನು ಚಿತ್ರ ಬರೆಯುವುದರಲ್ಲಿ ಚತುರನಾದ್ದರಿಂದ ನಿಮ್ಮ ಪೆಟ್ರೋಲಿನವರು ಈ ವಿಚಾರದಲ್ಲಿ ನಿಮ್ಮ ಜಿಲ್ಲೆಯಲ್ಲಿ ವಿದ್ವಾಂಸರೆನ್ನಿಸಿಕೊಳ್ಳಬೇಕೆಂಬುದೇ ನನ್ನ ಬಯಕೆ.

ಮೊದಲನೆಯದಾಗಿ, ಸ್ಕೌಟು ಯಾವಾಗಲೂ ಮುಂದೆ ಹೋಗತಕ್ಕವನೆಂಬುದನ್ನು ನಿಮ್ಮ ಹುಡುಗರಿಗೆ ಸ್ಪಷ್ಟಪಡಿಸುತ್ತೀಯೆ. ಅವನು ಹಿಂದೆ ಬರುತ್ತಿರುವವರ ಸಲುವಾಗಿಯೇ ಈ ಚಿಹ್ನೆಗಳನ್ನು ಉಪಯೋಗಿಸುವುದು.

ಸ್ಕೌಟು ಮುಂದೆ ಹೋಗುವುದು ಅಲ್ಲಿ ತಿಳಿಯಬೇಕಾದ ಎಲ್ಲಾ ಅಂಶಗಳನ್ನೂ ತಿಳಿದುಕೊಂಡು ಇತರರಿಗೆ ಅದರ ವರದಿಯನ್ನು ಮಾಡುವುದಕ್ಕಾಗಿಯೇ.

ಉದಾಹರಣೆಗೆ, ಸುಗಮವಾದ ದಾರಿ, ಒಂದು ಬೇಲಿಯನ್ನೋ ಅಥವಾ ಕಂದಕವನ್ನೋ ದಾಟಲು ಅನುಕೂಲವಾದ ಸ್ಥಳ, ನದಿಯನ್ನು ಹಾದು

ಹೋಗಲು ಅಥವಾ ಅದಕ್ಕೆ ಅಡ್ಡವಾಗಿ ಸೇತುವೆ ಕಟ್ಟಲು ಅತ್ಯುತ್ತಮವಾದ ಪ್ರದೇಶ, ಹೊಂಚು ಕಾಯಲು ಅಡಗುವುದಕ್ಕೆ ಅನುಕೂಲವಾದ ಜಾಗ, ಉಪಹಾರ ತೆಗೆದುಕೊಳ್ಳಲು ಯೋಗ್ಯವಾದ ಕಡೆ, ಅಥವಾ ವಾರಾಂತ್ಯದಲ್ಲಿ ಶಿಬಿರವಾಸ ಮಾಡಲು ಸರಿಯಾದ ಪ್ರದೇಶ ಇವುಗಳೆಲ್ಲವನ್ನೂ ಗೊತ್ತು ಮಾಡಿಕೊಳ್ಳುತ್ತಾನೆ.

ಇವುಗಳನ್ನು ತಾನು ಕಂಡುಹಿಡಿದುಕೊಂಡ ಮೇಲೆ ತನ್ನ ತಿಳುವಳಿಕೆಯನ್ನು ತನ್ನ ಗಂಪಿನವರಿಗೋ ತನ್ನ ಪೆಟ್ರೋಲಿನವರಿಗೋ ತಿಳಿಯಪಡಿಸಬೇಕೆಂದು ಅವನಿಗೆ ಆಶೆಯುಂಟಾಗುತ್ತದೆ. ಅವರು ಕಣ್ಣಿಗೆ ಕಾಣಿಸುವಷ್ಟು ಅಥವಾ ಕೂಗಿದರೆ ಕೇಳಿಸುವಷ್ಟು ದೂರದಲ್ಲಿದ್ದರೂ ಇರಬಹುದು. ಆಗ ಅವನು ಕೂಗಿಹೇಳುವುದರಿಂದಲೋ ಅಥವಾ ಸಂಕೇತಕ್ರಮದಿಂದಲೋ (Signalling) ತನ್ನ ಅಭಿಪ್ರಾಯಗಳನ್ನು ಅವರಿಗೆ ತಿಳಿಸುವನು. ಸಂತೇತ ಕ್ರಮಕ್ಕೆ ಬಾವುಟವನ್ನೋ ಸ್ಕೌಟ್ ದಂಡವನ್ನೋ ದೀಪವನ್ನೋ ಹೊಗೆಯನ್ನೋ ಉಪಯೋಗಿಸುವನು.

ಹಾಗಲ್ಲದೆ ಪೆಟ್ರೋಲ್ ಅಥವಾ ಗುಂಪು ಬಹಳ ದೂರದಲ್ಲಿರಬಹುದು. ಮತ್ತು ಅವರು ಬರುವುದಕ್ಕೆ ಎರಡು ಮೂರು ಗಂಟೆಗಳಕಾಲವಾದರೂ ಹಿಡಿಯಬಹುದು. ಅಥವಾ ಮರುದಿವಸದವರೆಗೂ ತಡವಾಗಬಹುದು. ಆದ್ದರಿಂದ ಅವರು ತಿಳಿದುಕೊಳ್ಳುವಂತಹ ಚಿಹ್ನೆಗಳನ್ನು ಗುರುತು ಮಾಡುವುದರಿಂದ ಅಭಿಪ್ರಾಯಗಳನ್ನು ತಿಳಿಸಬೇಕಾದ ಆವಶ್ಯಕತೆಯುಂಟಾಗುವುದು.

ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ಚಿಹ್ನೆಗಳು ಹತ್ತಿಪ್ಪತ್ತು ಇವೆ. ಅವುಗಳನ್ನು ಮೇಲೆ ಹೇಳಿದ ರೀತಿಯಲ್ಲಿ ಉಪಯೋಗಿಸಬಹುದು. ಇವುಗಲ್ಲದೆ ಪ್ರಪಂಚದ ಅರಣ್ಯವಾಸಿಗಳಲ್ಲಿ ಬಳಕೆಯಲ್ಲಿರುವ ನಲವತ್ತೈವತ್ತು ಚಿಹ್ನೆಗಳಿವೆ.

ಇವುಗಳಿಗೆ ಮೇಲಾಗಿ ಯಾವುದಾದರೂ ನಿವಾಸಿಗಳ ಪಣ ಅಥವಾ ಹುಡುಗರ ಪೆಟ್ರೋಲು ಇವುಗಳಿಗೆ ಸಂಬಂಧಿಸಿದಂತೆ ಅಸಂಖ್ಯಾತವಾದ ಸ್ವಂತ (ಖಾಸಗಿ) ಚಿಹ್ನೆಗಳು ರೂಢಿಯಲ್ಲಿರಬಹುದು.

ಕೋಮಲಪಾದನು ಇವುಗಳಲ್ಲಿ ಬಹಳ ಸುಲಭವಾಗಿರುವ ನಾಲ್ಕು ಚಿಹ್ನೆಗಳನ್ನು ತಿಳಿದೇತೀರಬೇಕೆಂತಲೂ ಹಾಗೆ ತಿಳಿಯದೆ ಹೋದರೆ ಅವನು ಸ್ಕೌಟಾಗಿರಲು ಅವನಿಗೆ ಸಾಧ್ಯವಿಲ್ಲವೆಂತಲೂ ನೀನು ನಿನ್ನ ಪೆಟ್ರೋಲಿನವರಿಗೆ ತಿಳಿಸುವೆ.

ಹುಡುಗನಿಗೆ ಓದು ಬರುವುದಾದರೆ ಬರವಣಿಗೆಯ ಮೂಲಕ ಅವನಿಗೆ ದಾರಿಯನ್ನು ತೋರಿಸಬಹುದು.

ಆದರೆ ಒಂದು ಕಾಗದದ ಮೇಲೆ ಏನಾದರೂ ಬರೆದು ಅದನ್ನು ರಸ್ತೆಯ ಮಧ್ಯದಲ್ಲಿ ನಿಮ್ಮ ಸ್ಕೌಟ್ ಸಹೋದರನು ನೋಡಲಿ ಎಂಬ ಉದ್ದೇಶದಿಂದ ಇಡುವುದಾದರೆ ಅವನು ನೋಡುವುದಕ್ಕೆ ಮುಂಚೆ ಅದು ಸ್ಕೌಟಲ್ಲದ ಬೇರೆ ಯಾರ ಕೈಗಾದರೂ ಸಿಕ್ಕುವುದೂ ಮತ್ತು ಅವನು ಅದನ್ನು ಆಸಕ್ತಿಯಿಂದ ಓದಿ ಆ ಮೇಲೆ ತನ್ನ ಜೇಬಿನಲ್ಲಿ ಹಾಕಿಕೊಂಡು ಹೊರಟುಹೋಗುವುದೂ ಖಂಡಿತ.

ಆದ್ದರಿಂದ ಸ್ಕೌಟ್ ಮೊದಲು ಕಲಿತುಕೊಳ್ಳಬೇಕಾದುದು ಒಂದು ಚೌಕದ ಚಿಹ್ನೆ. ಇದು ಕಾಗದ ಅಥವಾ ಒಂದು ಕವರಿನ ಚಿಹ್ನೆ. ಈ ಚೌಕದ ಒಂದು ಪಕ್ಕದಿಂದ ಒಂದು ಬಾಣದ ಗುರುತಿರುತ್ತದೆ. ಆ ಬಾಣದ ದಿಕ್ಕಿನಲ್ಲಿ ಮೂರು ಹೆಜ್ಜೆಗಳ ದೂರದಲ್ಲಿ ಒಂದು ಕಾಗದವಿದೆಯೆಂದು ಇದರ ಅರ್ಥ. ಈ ಚಿಹ್ನೆಯಿಂದ ಸ್ಕೌಟಾದವನು ಮಾತ್ರ ಕಾಗದವನ್ನು ಕಂಡುಹಿಡಿಯುತ್ತಾನೆ.

ದಾರಿಹೋಕರು ಇದನ್ನು ತಿಳಿಯುವುದು ಅಸಂಭವ.

ಕೆಲವು ಕೋಮಲಪಾದರ ಸಂಗಡ ಒಳ್ಳೆಯ ದಾರಿಯನ್ನು ಕಂಡುಹಿಡಿಯಲು ಮುಂದಾಗಿ ಹೋಗುತ್ತಿರುವ ಮುಖಂಡನು (Leader) ಹಿಂದೆ ಬರುವವರು ಸರಿಯಾದ ದಾರಿಯಲ್ಲಿ ಹಿಂಬಾಲಿಸುವರೆಂಬುದನ್ನು ಖಂಡಿತ ಮಾಡಿಕೊಳ್ಳಬೇಕಾಗುತ್ತದೆ.

(ಮೂರು ಹೆಜ್ಜೆಗಳಾಚೆ ಕಾಗದವಿದೆ.)

ಅವನು ಹಿಡಿದಿರುವ ದಾರಿಯು ಅವನು ಹೋಗಿರುವ ದಿಕ್ಕಿಗೆ ಬಾಣದ ಗುರುತುಗಳನ್ನು ಹಾಕುವುದರಿಂದ ತೋರಿಸಲ್ಪಡುತ್ತದೆ.

(ಹಿಡಿಯಬೇಕಾದ ದಾರಿ.)

ಪ್ರಾರಂಭದಲ್ಲಿ ಜನರು ಈ ರೀತಿ ದಾರಿ ತೋರಿಸುವಾಗ ನಿಜವಾದ ಬಾಣವನ್ನೋ ಅಥವಾ ಭರ್ಜಿಯನ್ನೋ ಉಪಯೋಗಿಸಿರಬಹುದು ಕ್ರಮೇಣ ಇದು ಬಹಳ ವೆಚ್ಚವನ್ನಪೇಕ್ಷಿಸುವ ರೀತಿಯೆಂಬುದನ್ನು ಕಂಡುಹಿಡಿದುಕೊಂಡು ಬಾಣದ ಗುರುತನ್ನು ಆಚರಣೆಗೆ ತಂದಿರಬೇಕು.

ಈ ಎಲ್ಲಾ ಗುರುತುಗಳನ್ನೂ ನಾವು ಹೋಗುವ ದಾರಿಯ ಬಲಭಾಗದಲ್ಲಿಯೇ ಹಾಕಬೇಕೆಂದು ನಿಮ್ಮ ಹುಡುಗರಿಗೆ ನೀನು ತಿಳಿಸಬೇಕು. ಈ ಗುರುತುಗಳನ್ನು ನೆಲದ ಮೇಲೋ, ಮರದ ಮೇಲೋ, ಗೇಟುಗಳ ಮೇಲೋ, ಗೋಡೆಗಳ ಮೇಲೋ ಬಲಗೈ ಕಡೆ ಹಾಕಬೇಕು.

ಹುಡುಗರು ಜಾಗ್ರತೆಯಾಗಿ ದಾರಿಯನ್ನು ಕಂಡುಹಿಡಿದುಕೊಂಡು ಬರಲಿ ಎಂಬುದೇ ಇದರ ಉದ್ದೇಶ. ಗುರುತುಗಳೆಲ್ಲಾ ಇಂಥಾ ಕಡೆಯೇ ಇರುತ್ತವೆಂಬುದು ಮುಂಚೆಯೇ ತಿಳಿದಿರುವುದರಿಂದ ಅವುಗಳಿಗಾಗಿ ಹುಡುಕಾಡುತ್ತಾ ಕಾಲವನ್ನು ಕಳೆಯದೆ ಅವರು "ಸ್ಕೌಟ್ ನಡಗೆ" (Scout's Pace) ಯಲ್ಲಿ ಜಾಗ್ರತೆ ಬರಬಹುದು.

ಮುಖಂಡನು ಸುಮಾರು ಹತ್ತು ಮೈಲಿಗಳ ದೂರ ಹೋಗಬೇಕಾದಲ್ಲಿ ಕೆಲಕೆಲವು ಗಜಗಳಿಗೆ ಗುರುತು ಹಾಕಲು ಅವನಿಗೆ ಕಾಲವಿರುವುದಿಲ್ಲ. ಐವತ್ತು ಅಥವಾ ನೂರು ಗಜಗಳಿಗೆ ಒಂದೊಂದು ಗುರುತನ್ನು ಹಾಕಬಹುದು.

ಮುಕ್ಕಾಲು ಮೈಲಿ ದೂರವಿರುವ ಯಾವುದೋ ಒಂದು ಸಣ್ಣ ಹಾದಿಯಲ್ಲಿ ಮುಖಂಡನು ಹೋಗಿದ್ದಾನೆಂದು ಭಾವಿಸೋಣ. ತಾನು ಅದರಲ್ಲಿ ಇಷ್ಟೇ ದೂರ ಹೋಗಿರುವುದನ್ನೂ ಮತ್ತು ಇಂಥಾ ಸ್ಥಳದಲ್ಲಿಯೇ ಇಂಥಾ ಕಡೆಗೆ ತಿರುಗಿರುವುದನ್ನೂ ಹೇಗೆ ತಿಳಿಸುವುದು ?

ಅವನು ಅದನ್ನು ಒಂದಕ್ಕೊಂದಕ್ಕೆ ಅಡ್ಡವಾಗಿ ಎರಡು ಗೀಟುಗಳನ್ನು ನೆಲದ ಮೇಲೆ ಹಾಕುವುದರಿಂದ ತೋರಿಸುತ್ತಾನೆ.

ಈ ಕಡೆ ಹೋಗಬೇಡ.

ಹೀಗೆ ಗುರುತು ಮಾಡಿದರೆ ಅಲ್ಲಿಂದ ಮುಂದೆ ಆ ದಾರಿಯಲ್ಲಿ ಹೋಗಬಾರದೆಂದರ್ಥ.

ಆಗ ಪೆಟ್ರೋಲಿನವರು ಅಕ್ಕಪಕ್ಕಗಳಲ್ಲಿ ನೋಡುತ್ತಾರೆ. ಅವರ ಕಣ್ಣಿಗೆ ಇಂಥಾ ಕಡೆಗೆ ಅವನು ಹೋಗಿದ್ದಾನೆಂಬುದನ್ನು ತಿಳಿಸುವುದಕ್ಕೆ

ಒಂದು ಬಾಣದ ಗುರುತೋ ಅಥವಾ ಒಂದು ಕಾಗದದ ಚಿಹ್ನೆಯೋ ಬೀಳುತ್ತದೆ.

ಈ ಬರಿಯ ಗುರುತು (×) ಒಂದು ಬಾಣವನ್ನು ಗುರುತು ಮಾಡಿ ಅದನ್ನು ಹೊಡೆದು ಹಾಕುವುದರಿಂದುಂಟಾಗುತ್ತದೆಂಬುದನ್ನೂ ಅದೆಲ್ಲವನ್ನೂ ಬರೆಯಲು ಕಾಲವಿಲ್ಲದ್ದರಿಂದ ಬರಿಯ × ಗುರುತನ್ನು ಹಾಕುವ ಪದ್ಧತಿಯುಂಟೆಂತಲೂ ನೀನು ನಿನ್ನ ಪೆಟ್ರೋಲಿನವರಿಗೆ ತಿಳಿಸುತ್ತೀಯೆ.

ದಾರಿಯು ಸಮಾಪ್ತಿಯಾಗುವ ಕಡೆ ಅವನು ಒಂದು ಶಿಬಿರವನ್ನೂ ಅದರ ಮಧ್ಯೆ ಒಂದು ಡೇರೆಯನ್ನೂ ಸೂಚಿಸುವಂತೆ "ನಾನು ಬಿಡಾರ ಮಾಡಿದ್ದೇನೆ" ಎಂಬ ಚಿಹ್ನೆಯನ್ನು ಒಂದು ದೊಡ್ಡ ವರ್ತುಳದಲ್ಲಿ ಒಂದು ಸಣ್ಣ ವರ್ತುಳವನ್ನು ಗುರುತು ಮಾಡುವುದರಿಂದ ಬರೆಯುತ್ತಾನೆ.

(ನಾನು ಬಿಡಾರ ಮಾಡಿದ್ದೇನೆ.)

ಹುಡುಗರು ಕೋಮಲ ಪಾದದ ಪರೀಕ್ಷಾಂಶಗಳನ್ನು ಮುಗಿಸಿ ಎರಡನೆಯ ದರ್ಜೆಯ ಪದಕಕ್ಕಾಗಿ ಕೆಲಸ ಮಾಡುವಾಗ ರೂಢಿಯಲ್ಲಿರುವ ಇತರ ಚಿಹ್ನೆಗಳನ್ನು ನೀನು ಅವರಿಗೆ ತೋರಿಸಿಕೊಡುತ್ತೀಯೆ.

ಉದಾಹರಣೆಗೆ, ಎರಡು ವಕ್ರರೇಖೆಗಳಿಗೆ ಅಡ್ಡವಾಗಿ ಎರಡು ಸರಳರೇಖೆಗಳನ್ನು ಹಾಕುವ ಚಿಹ್ನೆಯೊಂದುಂಟು. ವಕ್ರರೇಖೆಗಳು ನದಿಯನ್ನೂ ಸರಳರೇಖೆಗಳು ನದಿಯನ್ನು ದಾಟಲು ಅನುಕೂಲವಾದ ಸ್ಥಳವನ್ನೂ ಸೂಚಿಸುತ್ತವೆ. ಈ ಸ್ಥಳದಲ್ಲಿ ನದಿಯನ್ನು ದಾಟು ಎಂಬುದೇ ಇದರ ಅರ್ಥ.

(ಇಲ್ಲಿ ನದಿಯನ್ನು ದಾಟು.)

ಮೂರು ಬಾಣದ ತಲೆಯ ಗುರುತುಗಳು ಒಂದರಹಿಂದೊಂದು ಒಂದೇ ದಿಕ್ಕಿಗಿದ್ದರೆ ಶಾಂತಿಯೆಂದು ಸೂಚನೆ. ಎರಡು ಒಂದು ದಿಕ್ಕಿಗಿದ್ದು ಇನ್ನೊಂದು ಎದುರು ಕಡೆಗಿದ್ದರೆ, ಯುದ್ಧ ಎಂದು ಸೂಚನೆ. ಅಂದರೆ ಒಂದು ಬಾಣ ಇತರ ಬಾಣಗಳಿಗೆ ವಿರೋಧವಾಗಿ ನಿಂತಿದೆಯೆಂದರ್ಥ. (ಇದನ್ನು ಹಾಗೆಯೇ ಕ್ಷೇಮ ಅಥವಾ ತೊಂದರೆ ಎಂಬುದಕ್ಕೂ ಅನ್ವಯಿಸಬಹುದು.)

(ಶಾಂತಿ)

(ಯುದ್ಧ)

ಮುಖಂಡನ ಜೊತೆಯಲ್ಲಿ ಎರಡು ಮೂರು ಜನ ಸ್ಕೌಟುಗಳಿದ್ದರೆ ಅವನು ಒಂದು ಸರಳರೇಖೆಯು ಎರಡು ಬಾಣದ ರೇಖೆಗಳಾಗಿ ಭಾಗವಾದಂತೆ ಗುರುತು ಮಾಡಬಹುದು. ಆಗ ಅವರು ಬೇರೆಬೇರೆ ದಾರಿಗಳಲ್ಲಿ ಹೋಗಿದ್ದಾರೆಂದು ಸೂಚನೆ.

ಇವುಗಳಲ್ಲಿ ಒಂದು ಬಾಣದ ಕೊನೆಯಲ್ಲಿ ಯಾವುದೋ ಒಂದು ಸಂಖ್ಯೆಯೂ ಇನ್ನೊಂದರ ಕೊನೆಯಲ್ಲಿ ಲೀಡರಿನ ಪೆಟ್ರೋಲ್ ಚಿಹ್ನೆಯೂ ಇರಬಹುದು. ಆ ಲೀಡರು ಒಂದು ದಾರಿಯಲ್ಲಿ ಹೋಗಿದ್ದಾನೆಂದೂ ಉಳಿದವರು ಎಂದರೆ ಆ ಸಂಖ್ಯೆಯೆಷ್ಟೋ ಅಷ್ಟು ಮಂದಿ ಇನ್ನೊಂದು ದಾರಿಯಲ್ಲಿ ಹೋಗಿದ್ದಾರೆಂತಲೂ ಅರ್ಥ.

4



ಇಲ್ಲಿ ಭಾಗವಾಗಿದ್ದೇವೆ.

ಒಂದು ಬಹಳ ಮುಖ್ಯವಾದ ಚಿಹ್ನೆಯಿದೆ. ಅದು ಎಲ್ಲಾ ಸ್ಕೌಟುಗಳಿಗೂ ತಿಳಿದಿರಬೇಕು. ಅದರ ಅರ್ಥ "ಒಳ್ಳೆಯ ನೀರು" ಎಂದು. ಒಂದು ವರ್ತುಳವನ್ನು ಹಾಕಿ ಅದರಲ್ಲಿ ಮೂರು ವಕ್ರರೇಖೆಗಳನ್ನೆಳೆದು ವರ್ತುಳದ ಅಂಚಿಗೆ ಸೇರಿದಹಾಗೆ ನೀರಿರುವ ದಿಕ್ಕಿಗೆ ಒಂದು ಬಾಣದ ಗುರುತು ಹಾಕುವುದರಿಂದ ಈ ಚಿಹ್ನೆಯಾಗುತ್ತದೆ.



ಒಳ್ಳೆಯ ನೀರು ಈಕಡೆ.

ಒಂದು ಡೇರೆಯ ಸ್ಥೂಲಾಕಾರವನ್ನು ಬರೆದು ಅದರ ಕೆಳಗೆ ಒಂದು ಬಾಣದ ಗುರುತು ಮಾಡಿದರೆ ಶಿಬಿರವು ಆ ದಿಕ್ಕಿನಲ್ಲಿದೆಯೆಂದು ಸೂಚನೆ.



ಈಕಡೆ ಶಿಬಿರವಿದೆ.

ಎಲ್ಲಾ ಸ್ಕೌಟುಗಳಿಗೂ ತಿಳಿದಿರುವ ಈ ಸಾಮಾನ್ಯ ಚಿಹ್ನೆಗಳಲ್ಲದೆ ಪ್ರತಿಯೊಂದು ಪೆಟ್ರೋಲೂ ತನ್ನ ಸ್ವಂತವಾದ ಪೆಟ್ರೋಲ್ ಚಿಹ್ನೆಗಳನ್ನು ಇಟ್ಟು ಕೊಳ್ಳಬಹುದು. ಇದನ್ನು ಹುಡುಗರು ತಾವೇ ಕಂಡು ಹಿಡಿದು ಕೊಳ್ಳಬಹುದು.

ಸಿಂಹದ ಪೆಟ್ರೋಲಿನವರು ಸಿಂಹದ ಬಾಲದ ಗುರುತನ್ನು ಒಂದು ವಕ್ರರೇಖೆಯಿಂದ ಮಾಡಿ ಬಾಲದಕುಚ್ಚನ್ನು ರೇಖೆಯ ಕೊನೆಗೆ ಸೇರಿಸಬಹುದು.

ಹಾಗೆಯೇ ಜಿಂಕೆ ಪೆಟ್ರೋಲಿನವರು ಜಿಂಕೆಯ ಕೊಂಬಿನ ಆಕಾರವನ್ನು ಗುರುತು ಮಾಡಬಹುದು. ಮತ್ತು ಅದರಿಂದ ಅನೇಕ ಅಭಿಪ್ರಾಯಗಳು ಬರುವಂತೆ ಮಾಡಬಹುದು.

ಈ ಚಿಹ್ನೆಗಳನ್ನು ಗುರುತು ಮಾಡುವಾಗ ಸೀಮೆಯ ಸುಣ್ಣವನ್ನುಉಪಯೋಗಿಸುವುದು ಬಹಳ ಒಳ್ಳೆಯದಲ್ಲವೆಂಬುದನ್ನು ಜ್ಞಾಪಕದಲ್ಲಿಡಬೇಕು.

ಒಳ್ಳೆಯ ಸ್ಕೌಟು ಸಾಧ್ಯವಾದ ಮಟ್ಟಿಗೆ ಗೋಡೆಗಳ ಮೇಲಾಗಲಿ ಗೇಟುಗಳ ಮೇಲಾಗಲಿ ಸೀಮೆಯ ಸುಣ್ಣದಿಂದ ಬರೆದು ಅವುಗಳನ್ನು ಅಂದಗೆಡಿಸುವುದಿಲ್ಲ. ಹಿಂದೆ ಬರುವ ಸ್ಕೌಟುಗಳು ಈ ಗುರುತುಗಳನ್ನು ಖಂಡಿತವಾಗಿಯೂ ಅಳಿಸಿ ಕೊಂಡು ಹೋಗಬೇಕು.

ಹಳ್ಳಿಯ ದಾರಿಗಳಲ್ಲಿ ಚಿಹ್ನೆಗಳನ್ನು ಮರದ ರೆಂಬೆಗಳನ್ನೋ ಕುರುಚಲು ಗಿಡಗಳನ್ನೋ ಬಗ್ಗಿಸುವುದರ ಮೂಲಕ ಮಾಡಬಹುದು. ಅಥವಾ ಒಣಗಿದ ಕಡ್ಡಿಗಳನ್ನು ನೆಲದಮೇಲೆ ಆಕಾರಕ್ಕೆ ಸರಿಯಾಗಿಡುವುದರಿಂದ ಗುರುತು ಮಾಡಬಹುದು. ಕಲ್ಲುಗಳನ್ನು ಜೋಡಿಸುವುದರಿಂದಲೂ ಮತ್ತು

ಒಂದು ಕೋಲಿನಿಂದ ಗೆರೆ ಎಳೆಯುವುದರಿಂದಲೂ ಈ ಉದ್ದೇಶವನ್ನು ಸಾರ್ಥಕಪಡಿಸಿಕೊಳ್ಳಬಹುದು.

ಉದಾಹರಣೆಗೆ "ನಾನು ಬಿಡಾರ ಮಾಡಿದ್ದೇನೆ" ಎಂಬ ಚಿಹ್ನೆಯನ್ನು ಒಂದು ಗುಂಡಾಗಿರುವ ದೊಡ್ಡ ಕಲ್ಲಿನ ಮೇಲೆ ಯಾವುದಾದರೂ ಒಂದು ಗುಂಡಾಗಿರುವ ಹೂವನ್ನಿಡುವುದರಿಂದ ಮಾಡಬಹುದು.

ಹೂವುಗಳು ತಾವಾಗಿ ಬಂದು ಗುಂಡಾಗಿರುವ ಒಂದು ದೊಡ್ಡ ಕಲ್ಲಿನ ಮೇಲೆ ಬಿದ್ದಿರುವುದಿಲ್ಲವೆಂಬುದು ಸ್ಕೌಟುಗಳಿಗೆ ಗೊತ್ತು. ಈ ಚಿಹ್ನೆಯು ತಮಗೋಸ್ಕರ ಮುಖಂಡನಿಂದ ಹಾಕಲ್ಪಟ್ಟದ್ದೆಂಬುದನ್ನು ಅವರು ತಿಳಿಯುತ್ತಾರೆ.

ಮೇಲೆ ಹೇಳಿರುವುದು ಸ್ಕೌಟ್ ಚಿಹ್ನೆಗಳ ವಿಚಾರದಲ್ಲಿ ಕೆಲವು ಸ್ಥೂಲವಾದ ಅಭಿಪ್ರಾಯಗಳು ಮಾತ್ರವಾಗಿವೆ. ಇನ್ನೂ ಅನೇಕ ಚಿಹ್ನೆಗಳನ್ನು ವನ್ಯವಿದ್ಯೆ ಅಥವಾ ಸ್ಕೌಟ್ ಕೆಲಸ ಇವುಗಳಿಗೆ ಸಂಬಂಧಪಟ್ಟ ಪುಸ್ತಕಗಳಿಂದ ತಿಳಿದುಕೊಳ್ಳಬಹುದು. ಅಲ್ಲದೆ ನಿಮ್ಮ ಪೆಟ್ರೋಲಿನವರು ಇನ್ನೂ ಕೆಲವು ಚಾತುರ್ಯ ಯುಕ್ತವಾದ ಚಿಹ್ನೆಗಳನ್ನು ತಾವೇ ಮಾಡಿಕೊಳ್ಳಬಹುದು.

ಯಾವ ಹುಡುಗನೇ ಆಗಲಿ ತನ್ನ ಹೆಸರನ್ನು ತಾನು ಚಿಹ್ನೆಗಳ ಮೂಲಕ ಬರೆಯುವುದು ತಿಳಿದ ಹೊರತು ಹಳ್ಳಿಗಾಡುಗಳ ಕಡೆ ಸ್ಕೌಟಿಂಗ್ ಹೋಗಬಾರದು. ಒಂದು ಪೆಟ್ರೋಲಿನಲ್ಲಿ ಪ್ರತಿಯೊಬ್ಬ ಹುಡುಗನಿಗೂ ಒಂದೊಂದು ಸಂಖ್ಯೆಯು ಕೊಡಲ್ಪಟ್ಟಿರುತ್ತದೆ. ಅವನು ತನ್ನ ಪೆಟ್ರೋಲಿನ ಪಕ್ಷಿ ಅಥವಾ ಪ್ರಾಣಿಯ ಚಿಹ್ನೆಯನ್ನು ಬರೆದು ಅದರ ಪಕ್ಕದಲ್ಲಿ ತನ್ನ ಸಂಖ್ಯೆಯನ್ನು ಬರೆಯುತ್ತಾನೆ.

ಉದಾಹರಣೆಗಾಗಿ ಹುಲಿಯ ತಲೆಯನ್ನು ಬರೆದು ಅದರ ಪಕ್ಕದಲ್ಲಿ ೨ ಎಂಬ ಸಂಖ್ಯೆಯನ್ನು ಬರೆದು ಅದರ ಪಕ್ಕದಲ್ಲಿ ಒಂದು ಬಾಣದ ಗುರುತು ಮಾಡಿದರೆ ಹುಲಿ ಪೆಟ್ರೋಲಿನ "ಸೆಕೆಂಡ್" (ಸಹಾಯಕನು) ಬಾಣದ ಗುರುತು ತೋರಿಸುವ ದಿಕ್ಕಿಗೆ ಹೋಗಿದ್ದಾನೆಂದು ಅರ್ಥ.

ನಿನ್ನ ಪ್ರೀತಿಯ ಭ್ರಾತೃ.
ಎಸ್. ಬಿ.

ಕನ್ನಡದಲ್ಲಿ ಸಂಕೇತಕ್ರಮ.

(ಮುಂದುವರಿದದ್ದು)

ಕಳೆದ ಅಗಸ್ಟ್ ತಿಂಗಳ ಸಂಚಿಕೆಯಲ್ಲಿ ಮೋರ್ಸ್ ಕ್ರಮದ ಅಕ್ಷರ ಸಂಕೇತಗಳನ್ನು ತಿಳಿಸಲಾಯಿತು. ಇನ್ನು ವರ್ತಮಾನಗಳನ್ನು ಸಂಕೇತ ಕ್ರಮದಲ್ಲಿ ಕಳುಹಿಸಲು ಅವಶ್ಯಕವಾಗಿ ಬೇಕಾಗುವ ಕೆಲವು ವಿಶೇಷ ಸಂಕೇತಗಳು ಈ ಕೆಳಗೆ ಕೊಡಲ್ಪಟ್ಟಿವೆ. ಇವುಗಳಲ್ಲಿ ಒಂದೆರಡು ಹೊರತು ಉಳಿದವುಗಳು ಮೋರ್ಸ್ ಮತ್ತು ಸೆಮಾಫೋರ್ ಕ್ರಮಗಳೆರಡಕ್ಕೂ ಒಂದೇ ಆಗಿರುತ್ತವೆ. ಎಲ್ಲಿ ವ್ಯತ್ಯಾಸಗಳಿವೆಯೋ ಅದನ್ನೂ ಸಹ ತೋರಿಸಲಾಗಿದೆ.

ವಿಶೇಷ ಸಂಕೇತದ ಹೆಸರು.	ಸೆಮಾಫೋರ್ ಸಂಕೇತ.	ಮೋರ್ಸ್ ಸಂಕೇತ.
ಸಾಮಾನ್ಯ ಉತ್ತರ. (General Answer)	ಅ	ಇ
ಸಿದ್ಧವಾಗಿದ್ದೀಯೋ. (Calling up Sign)	ವ್ ಇ	ವ್ ಇ
ಸಿದ್ಧವಾಗಿದ್ದೇನೆ. (Ready)	ಸ್	ಸ್
ಸಿದ್ಧವಾಗಿಲ್ಲ. (Not ready)	ಲ್	ಲ್
ಮುಗಿಯಿತು. (End of the message)	ಅತ್	ಅತ್
ಆಗಲಿ [ಮುಗಿಯಿತು ಎಂಬುದಕ್ಕೆ ಉತ್ತರವಾಗಿ.] (Alright)	ತ್	ತ್
ಹೋಗುತ್ತೇವೆ. (Good Bye)	ನ್ ಮ್	ನ್ ಮ್
ಬಲಕ್ಕೆ ಹೋಗು. (Move to your right)	ಬ್ ಲ್	ಬ್ ಲ್
ಎಡಕ್ಕೆ ಹೋಗು. (Move to your left)	ಎಡ್	ಎಡ್
ಮೇಲೆ ಹೋಗು. (Move higher)	ಮ್ ಲ್	ಮ್ ಲ್
ಕೆಳಗೆ ಹೋಗು. (Move lower)	ಕ್ ಳ್	ಕ್ ಳ್

ಆವರಣ ಚಿಹ್ನೆ. (Brackets)	ಅವ್	ಅವ್
ಪ್ರಸಿದ್ಧಾರ್ಥಕ ಚಿಹ್ನೆ. (Inverted commas)	ಪ್ ಚ್	ಪ್ ಚ್
ಪೂರ್ಣವಿರಾಮ. (Full Stop)	ಪ್ ವ್	ಪ್ ವ್
ದಶಮಾಂಶ. (Point)	ದ್ ಶ್	ದ್ ಶ್
ಗೀಟು [ಭಿನ್ನರಾಶಿಗಳಲ್ಲಿ ಮೇಲಿರುವ ಸಂಖ್ಯೆಯನ್ನು ಕೆಳಗಿನ ಸಂಖ್ಯೆಯಿಂದ ಪ್ರತ್ಯೇಕಿಸುವ ಚಿಹ್ನೆ. (Horizantal Bar)	ಗ್ ಟ್	ಗ್ ಟ್
ಪೂರ್ಣ ಸಂಖ್ಯೆಗಳನ್ನು ಭಿನ್ನರಾಶಿಗಳಿಂದ ಪ್ರತ್ಯೇಕಿಸುವ ಸಂಕೇತ. (Separating whole numbers from fractions)	ಮ್ ಮ್	ಮ್ ಮ್
ಪುನಹ ಹೇಳು. (Repeat)	ಪ್ ಹ್	ಪ್ ಹ್
ಹಿಂದಿನ ಶಬ್ದ. (Word before)	ಹ್ ಶ್	ಹ್ ಶ್
ಮುಂದಿನ ಶಬ್ದ. (Word after)	ಮ್ ಶ್	ಮ್ ಶ್
ಹೊಡೆದು ಹಾಕು. (Erase)	ಕ್ರಮದಲ್ಲಿಯೇ ಹೊಡೆದು ಹಾಕು ಎಂಬುದಕ್ಕೆ ಸಂಕೇತವಿದೆ.	●●●●●●

ಮೇಲೆ ಹೇಳಿರುವ ವಿಶೇಷ ಸಂಕೇತಗಳೆಲ್ಲವೂ ಇಂಗ್ಲೀಷ್ ಭಾಷೆಯಲ್ಲಿಯೂ ಇವೆ. ಆದರೆ ಇಲ್ಲಿ ಕೊಟ್ಟಿರುವ ಕನ್ನಡ ಸಂಕೇತಗಳು ಸಂಪೂರ್ಣವಾಗಿ ಬೇರೆಯಾಗಿವೆ. ಸಾಮಾನ್ಯವಾಗಿ ಉಚ್ಚಾರಣೆಗೆ ಸರಿಹೋಗುವಂತೆ ಸಂಕೇತವೂ ಇದ್ದರೆ ಜ್ಞಾಪಕಕ್ಕೆ ತಂದುಕೊಳ್ಳುವುದು ಸುಲಭವೆಂಬ ಅಭಿಪ್ರಾಯದಿಂದ ಈ ರೀತಿ ಮಾಡಲ್ಪಟ್ಟಿದೆ.

ಇದುವರೆಗೆ ಹೇಳಿರುವ ಎರಡು ಕ್ರಮಗಳೂ ಮತ್ತು ಈ ಸಂಕೇತಗಳೂ ಇಂಗ್ಲಿಷ್ ಸಂಕೇತವನ್ನರಿಯದವರ ಉಪಯೋಗಕ್ಕಾಗಿ ಕೊಡಲ್ಪಟ್ಟವೆ. ಈ ಎರಡು ಕ್ರಮಗಳಿಂದಲೂ ಕನ್ನಡ

ಭಾಷೆಯಲ್ಲಿಯೇ ವರ್ತಮಾನವನ್ನು ಕಳುಹಿಸಲು ಸಾಧ್ಯವೆಂತ ನನಗೆ ಕಂಡುಬಂದಿದೆ. ಇತರರು ಅವುಗಳನ್ನು ಪ್ರಯತ್ನ ಮಾಡಿ ನೋಡಬೇಕಾಗಿದೆ.

ಈ ವಿಚಾರದಲ್ಲಿ ಎಲ್ಲಾ ಅಂಶಗಳನ್ನೂ ಒಳಗೊಂಡ ಒಂದು ಹಸ್ತಪುಸ್ತಕವನ್ನು ಇಷ್ಟರಲ್ಲಿಯೇ ನಮ್ಮ ಸ್ಕೌಟ್ ಸಹೋದರರ ಉಪಯೋಗಕ್ಕಾಗಿ ಪ್ರಚುರಪಡಿಸಬೇಕೆಂಬ ಆಶೆಯುಳ್ಳವನಾಗಿದ್ದೇನೆ. ಅನೇಕರು ಇವುಗಳನ್ನು ಶೀಘ್ರದಲ್ಲಿ ಆಚರಣೆಗೆ ತಂದು ಈ ಕ್ರಮಗಳಲ್ಲಿರುವ ದೋಷಗಳನ್ನೂ, ತೊಂದರೆಗಳನ್ನೂ ಮೈಸೂರು ಸ್ಕೌಟ್ ಪತ್ರಿಕೆಯ ಮೂಲಕ ತಿಳಿಸುವುದಾದರೆ ಅವರಿಗೆ ತುಂಬಾ ಋಣಿಯಾಗಿರುತ್ತೇನೆ. ಹಾಗೆಯೇ ಈ ಕ್ರಮಗಳನ್ನು ಯಾರಾದರೂ ಅಭ್ಯಾಸ ಮಾಡಿ ಅವುಗಳಿಂದ ವರ್ತಮಾನವನ್ನು ಕಳುಹಿಸುವುದು ಸಾಧ್ಯವೆಂದು ಕಂಡುಬಂದರೆ ಅದನ್ನು ತಿಳಿಸುವವರಿಗೂ ನನ್ನ ಧನ್ಯವಾದಗಳು.

ಸಂಕೇತಗಾರ.

ಮರಿಗಳು.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

೧೨ನೆ ಅಧ್ಯಾಯ.

ಮತ (Religion)

[ಸೂಚನೆ:—ಮೂಲಗ್ರಂಥದಲ್ಲಿ ಈ ಅಧ್ಯಾಯವು ಕ್ರೈಸ್ತಮತಾನುಯಾಯಿಗಳ ದೃಷ್ಟಿಯಿಂದ ಬರೆಯಲ್ಪಟ್ಟಿದೆ. ಮೂಲ ಗ್ರಂಥಕರ್ತರ ಮತವು ಕ್ರೈಸ್ತಮತ. ಅದರಲ್ಲಿ ಬರೆದಿರುವವಿಚಾರಗಳು ಇತರ ಮತಗಳಿಗೆ ಸೇರಿದ ಆಕೇಲರಿಗೂ ಹಿಂಡುಗಳಿಗೂ ಅನ್ವಯಿಸಬಹುದೆಂದು ಅವರ ಅಭಿಪ್ರಾಯ. ಈ ಅಧ್ಯಾಯದಲ್ಲಿ ಸಂಪೂರ್ಣವಾಗಿ ಕ್ರೈಸ್ತಮತೀಯರಿಗೇ ಅನ್ವಯಿಸುವ ವಿಚಾರಗಳನ್ನು ಬಿಟ್ಟು ಎಲ್ಲಾ ಮತೀಯರಿಗೂ ಅನ್ವಯಿಸುವ ವಿಚಾರಗಳನ್ನು ಮಾತ್ರ ಮೂಲ ಗ್ರಂಥದಿಂದ ತೆಗೆದುಕೊಂಡು ಅದರ ಜೊತೆಗೆ ನಮ್ಮ ಸಂಸ್ಕೃತಿಯ ದೃಷ್ಟಿಯಿಂದ ಸೇರಿಸಬೇಕಾದ ಕೆಲವು ಅಂಶಗಳನ್ನೂ ಸೇರಿಸಿ ಒಟ್ಟುಗೂಡಿಸಿ ಈ ಅಧ್ಯಾಯವನ್ನು ಬರೆದಿದ್ದೇನೆ. ಈ ಅಧ್ಯಾಯದಲ್ಲಿ ಮೂಲ ಗ್ರಂಥದ ವಿಚಾರದಲ್ಲಿ ನಾನು ಸಂಪೂರ್ಣ ಸ್ವಾತಂತ್ರ್ಯವನ್ನು ವಹಿಸಿರುವುದರಿಂದ ಈ ಅಧ್ಯಾಯವು ಅದರ ಭಾಷಾಂತರವೆಂತ ಹೇಳಲಾರೆ—ಭೀಲ್]

ಮತದ ವಿಚಾರವಾಗಿ ಇದಕ್ಕೆ ಮೊದಲೇ ಹೇಳಬೇಕಾಗಿತ್ತು. ಆದರೂ ಹಿಂಡಿಗೆ ಸಂಬಂಧಪಟ್ಟ ವಾತಾವರಣವು ಕಲ್ಪನೆಯಾಗುವವರೆಗೂ ಈ ವಿಚಾರವನ್ನು ಹೇಳುವುದರಿಂದ ಪ್ರಯೋಜನವಿಲ್ಲವೆಂದು ಕಂಡು ಬಂದುದರಿಂದ ಇದುವರೆಗೂ ಅವಕಾಶಮಾಡಲಾಯಿತು.

ಈ ವಿಚಾರದಲ್ಲಿ ಮುಂದೆ ಹೋಗುವುದಕ್ಕೆ ಮೊದಲು ಮತವೆಂದರೇನೆಂಬುದನ್ನು ನಾವು

ತಿಳಿದು ಕೊಳ್ಳುವುದು ಅವಶ್ಯಕ. ಕೆಲವರ ಅಭಿಪ್ರಾಯದಲ್ಲಿ ಆಯಾ ಮತಗಳಿಗೆ ಸಂಬಂಧ ಪಟ್ಟ ಕೆಲವು ಆಚರಣೆಗಳು ಅಂದರೆ ಬಾಹ್ಯಾಡಂಬರಗಳು ಇದ್ದರೆ ಅದೇ ಹೆಗ್ಗುರುತು. ಅವು ಇಲ್ಲವಾದರೆ ಮತವೇ ಇಲ್ಲವೆಂದು ಅವರ ಅಭಿಪ್ರಾಯ. ಇನ್ನು ಕೆಲವರು ಈ ಬಾಹ್ಯಾಡಂಬರಗಳು ಜನರಿಗೆ ಮೋಸಮಾಡುವುದಕ್ಕಾಗಿಯೇ ಇವೆಯೆಂತಲೂ ನಿಜವಾದ ಭಕ್ತಿಯಿರುವವರಿಗೆ ಈ ಬಾಹ್ಯಾಡಂಬರಗಳಿಂದ ಯಾವ ಪ್ರಯೋಜನವೂ ಇಲ್ಲವೆಂತಲೂ ಅಭಿಪ್ರಾಯ ಪಡುತ್ತಾರೆ. ನಿಷ್ಪಕ್ಷಪಾತ ದೃಷ್ಟಿಯಿಂದ ನೋಡುವುದಾದರೆ ಮನುಷ್ಯನಿಗೆ ದೈವಭಕ್ತಿಯೂ ಸೃಷ್ಟಿ ಸಮುದಾಯದಲ್ಲಿ ಪ್ರೇಮವೂ ಇಲ್ಲದಿದ್ದಪಕ್ಷದಲ್ಲಿ ಯಾವ ಕರ್ಮಾಚರಣೆಯಿದ್ದರೂ ಅದು ಜೀವವಿಲ್ಲದ ದೇಹದಂತೆಯೇ. ತನ್ನ ಮತದಿಂದ ನಿಯಾಮಕವಾದ ಕೆಲಸಗಳನ್ನು ಯಂತ್ರವು ಮಾಡುವಂತೆ ಮಾಡುವ ಮನುಷ್ಯನು ಸರ್ವೋತ್ತಮವೆಂತಲೂ ದೈವಭಕ್ತಿಯುಳ್ಳವನೆಂತಲೂ ಖಂಡಿತವಾಗಿ ಹೇಳಲಾಗುವುದಿಲ್ಲ. ದೈವಭಕ್ತಿಯು ಆಂತರಿಕವಾದದ್ದು ಮತ್ತು ಸೃಷ್ಟಿಕೋಟಿಯಲ್ಲಿ ಪ್ರೇಮವೂ ಕೂಡ ಅದೇ ಜಾತಿಗೆ ಸೇರಿದ್ದು. ಆದುದರಿಂದ ನಾವು ಮತದ ವಿಚಾರವನ್ನು ಕುರಿತು ವಿಮರ್ಶೆ ಮಾಡುವಾಗ ಬರಿಯ ಬಾಹ್ಯಕರ್ಮಗಳ ಕಡೆಗೆ ನೋಡದೆ ಆಯಾ ಮತದ ತತ್ವಗಳ ಕಡೆಗೆ ಹೆಚ್ಚಾಗಿ ದೃಷ್ಟಿಯನ್ನಿಡಬೇಕು.

ಹೀಗೆ ಹೇಳಿದ ಮಾತ್ರಕ್ಕೇ ಕರ್ಮಗಳನ್ನೆಲ್ಲಾ ಬಿಟ್ಟು ಬಿಡಬೇಕೆಂತ ಅಭಿಪ್ರಾಯವಲ್ಲ. ಮನುಷ್ಯನ ಹೃದಯದಲ್ಲಿ ಹುಟ್ಟುವ ಭಾವವು ಅವನು ಮಾಡುವ ಕೆಲಸಗಳಿಂದ ತಾನೇ ಹೊರಬೀಳುವುದು. ಮನುಷ್ಯನಾದರೋ (ಸಮಾಧಿಯಲ್ಲಿರುವವನನ್ನು ಬಿಟ್ಟರೆ) ಸುಮ್ಮನೆ ಕುಳಿತಿರಲಾರನು. ಯಾವುದಾದರೂ ಕೆಲಸವನ್ನು ಮಾಡಬೇಕಾಗುವುದು. ಆದುದರಿಂದ ಒಬ್ಬ ಮನುಷ್ಯನಲ್ಲಿ ದೈವಭಕ್ತಿಯೂ ಸೃಷ್ಟಿವರ್ಗದಲ್ಲಿ ಪ್ರೇಮವೂ ಇದ್ದರೆ ಅವು ತಾನಾಗಿಯೇ ವ್ಯಕ್ತವಾಗುವುವು. ಕರ್ಮವೆಂದರೆ ಕೆಲವು ನಿರ್ದಿಷ್ಟವಾದ ಆಚರಣೆಗಳೆಂಬ ಅರ್ಥಮಾಡದೆ ಮನುಷ್ಯನು ಮಾಡಬೇಕಾದ ಕೆಲಸಗಳೆಂತ ಅರ್ಥಮಾಡುವುದಾದರೆ ಇಷ್ಟನ್ನು ನಾವು ಧೈರ್ಯವಾಗಿ ಹೇಳಬಹುದು. ಪ್ರತಿಯೊಬ್ಬನಲ್ಲಿಯೂ ದೈವಭಕ್ತಿ ಮತ್ತು ಮತಧರ್ಮದಲ್ಲಿ ಆಸಕ್ತಿ ಇರಬೇಕು. ಮತ್ತು ಅವುಗಳು ಅವನು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಕಂಡು ಬರುತ್ತಿರಬೇಕು. ಈ ದೃಷ್ಟಿಯಿಂದ ನೋಡುವುದಾದರೆ ಧರ್ಮ ಕರ್ಮಗಳೆರಡರ ಅವಶ್ಯಕತೆಯೂ ನಮಗುಂಟು. ಧರ್ಮವು ಬಹುಮಟ್ಟಿಗೆ ಎಲ್ಲಾ ಮತಗಳಿಗೂ ಸಾಮಾನ್ಯವಾಗಿರುತ್ತದೆ. ಇವುಗಳ ಮೊತ್ತವನ್ನು ಮೂಲಧರ್ಮಗಳೆಂದು ಹೇಳಬಹುದು. ಮನುಷ್ಯನು ಸತ್ಪ್ರಜೆಯಾಗಿರಲು ಯಾವಧರ್ಮಗಳು ಅವನಲ್ಲಿರಬೇಕೋ ಆ ಧರ್ಮಗಳು ಎಲ್ಲಾ ಮತಗಳಲ್ಲಿಯೂ ಕಂಡು ಬರುತ್ತವೆ. ಆದುದರಿಂದ ನಮ್ಮ ಭ್ರಾತೃವರ್ಗದಲ್ಲಿ ಧರ್ಮಾಚರಣೆಯ ವಿಚಾರದಲ್ಲಿ ಯಾವ ವಿವಾದವೂ ಹುಟ್ಟಲಾರದು.

ಇನ್ನು ಕರ್ಮಾಚರಣೆಯ ವಿಚಾರವೊಂದುಳಿಯಿತು. ಕರ್ಮವೆಂದರೆ ಮತಗಳಿಂದ ವಿಧಿಸಲ್ಪಟ್ಟ ಕೆಲವು ನಿರ್ದಿಷ್ಟ ಕಾರ್ಯಗಳಿಗೆ ಮಾತ್ರ ಈ ಹೆಸರು ವಾಡಿಕೆಯಾಗಿ ಬಂದಿದೆ. ವಿಭೂತಿ ಹಚ್ಚುವುದು, ಮುದ್ರೆ ಅಥವಾ ನಾಮ ಹಾಕಿಕೊಳ್ಳುವುದು, ಶಿವಪೂಜೆ, ನಮಾಜು, ಪ್ರಾರ್ಥನೆ ಅಥವಾ ಸಂಧ್ಯಾವಂದನೆ ಇವುಗಳನ್ನು ಮಾಡುವುದು ಇವೇ ಮುಂತಾದ ಕೆಲಸಗಳಿಗೆ ಕರ್ಮವೆಂಬ ಹೆಸರು ಬಂದಿದೆ. ಇನ್ನು ಕೆಲವರು ವಿವಾಹಾದಿ ಸಂಸ್ಕಾ

ರಗಳಿಗೂ ಈ ಶಬ್ದವನ್ನುಪಯೋಗಿಸುತ್ತಾರೆ. ಇವುಗಳ ವಿಚಾರದಲ್ಲಿ ನಾವು ಹೆಚ್ಚು ಎಚ್ಚರದಿಂದಿರಬೇಕು.

ನಮ್ಮ ಹಿಂದುಗಳಲ್ಲಿ ಅನೇಕ ಮತಗಳಿಗೆ ಸೇರಿದ ಮಕ್ಕಳಿರುತ್ತಾರೆ. ಆಕೇಲನೇ ಒಂದು ಮತದವನಿರಬಹುದು. ಹೀಗಿರುವಾಗ ಆಕೇಲನು ತಾನೇ ನಿಂತು ಪ್ರತಿಯೊಂದು ಮತದವರೂ ಅವರವರಿಗೆ ತಕ್ಕ ಕರ್ಮಗಳನ್ನಾಚರಿಸುವಂತೆ ಮಾಡುವುದು ಸಾಧ್ಯವಿಲ್ಲ. ಹಾಗೆ ಸಾಧ್ಯವಾಗುವುದಾದರೂ ಅದು ಸಾಧುವಾದದ್ದಲ್ಲ.

ನಮ್ಮ ಸಮಾಜದ ಸ್ಥಿತಿಯನ್ನು ನೋಡಿದರೆ ಯಾವ ವಿಧವಾದ ಕಡ್ಡಾಯವಾದ ಕಟ್ಟಳೆಗಳೂ ಈ ವಿಚಾರದಲ್ಲಿ ಕಂಡುಬರುವುದಿಲ್ಲ. ಒಂದೇ ಮತಕ್ಕೆ ಸೇರಿದ ನಾಲ್ಕು ಜನರ ಮನೆಗಳಿಗೆ ಹೋಗಿ ನೋಡಿದರೆ, ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ವಿಧವಾದ ಆಚರಣೆಯು ಕಂಡುಬರುತ್ತದೆ. ಒಂದು ಚಿಕ್ಕ ಉದಾಹರಣೆಯನ್ನು ತೆಗೆದುಕೊಳ್ಳೋಣ. ಕೆಲವರು ಬ್ರಾಹ್ಮಣರ ಮನೆಗಳಲ್ಲಿ ಊಟದ ಹೊತ್ತಿಗೆ ಸ್ನಾನ ಮಾಡಿ ಒಗೆದ ಬಟ್ಟೆಗಳನ್ನುಟ್ಟು ಸಂಧ್ಯಾವಂದನೆ ಮಾಡಿ ಮಡಿಯಲ್ಲಿ ಊಟ ಮಾಡುವ ಪದ್ಧತಿ ಇದೆ. ಮತ್ತೆ ಕೆಲವರಲ್ಲಿ ದೊಡ್ಡವರೂ ಸಹ ಸಂಧ್ಯಾವಂದನೆ ಮುಂತಾದವುಗಳಿಗೆ ಗಮನ ಕೊಡದೆ ಉಟ್ಟಿದ್ದ ಬಟ್ಟೆಯಲ್ಲಿಯೇ (ಷರಟು ಸಹಾ ಹಾಕಿಕೊಂಡು) ಊಟ ಮಾಡುವ ಪದ್ಧತಿಯಿದೆ. ಹೀಗೆಯೇ ಇನ್ನೂ ಅನೇಕ ವಿಚಾರಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಹೀಗಿರುವಾಗ ಹಿಂದಿನಲ್ಲಿ ಒಂದು ಮತದವರೆಲ್ಲರೂ ಇಂಥಾದ್ದನ್ನು ಆಚರಿಸಲೇಬೇಕೆಂತ ಕಟ್ಟಳೆ ಮಾಡುವುದು ಸರಿಯಾಗಿ ತೋರುವುದಿಲ್ಲ. ಆದುದರಿಂದ ಈ ಬಾಹ್ಯಾಚರಣೆಗಳ ವಿಚಾರದಲ್ಲಿ ನಾವು ಹೆಚ್ಚು ಭಾಗ ವಹಿಸದೆ ಅವುಗಳನ್ನು ತಂದೆತಾಯಿಗಳಿಗೇ ಬಿಟ್ಟುಬಿಡುವುದು ಒಳ್ಳೆಯದು. (ಇದರಲ್ಲಿ ನಾವು ಎಷ್ಟುಮಟ್ಟಿಗೆ ಭಾಗವಹಿಸಬಹುದೆಂಬುದನ್ನು ಮುಂದೆ ತಿಳಿಸಲಾಗುವುದು.)

ಈ ಕಾರಣದಿಂದ ನಾವು ಹಿಂಡಿನಲ್ಲಿ ಮತದ ಆಚರಣೆಯೆಂದರೆ ಎಲ್ಲಾ ಮತಗಳಿಗೂ ಮೂಲಾಧಾರಗಳಾದ ಧರ್ಮಗಳನ್ನು ತಿಳಿದುಕೊಂಡು ಮರಿಗಳು ಅವುಗಳನ್ನು ಕಾರ್ಯದ ಮೂಲಕ ಆಚರಣೆಗೆ ತರುವಂತೆ ಮಾಡಿದಲ್ಲಿ ನಾವು ಮತ ವಿಚಾರದಲ್ಲಿ ಮಾಡಬೇಕಾದ್ದನ್ನೆಲ್ಲಾ ಮಾಡಿದಂತಾಗುತ್ತದೆ.

ಚೀಫ್ ಸ್ಕೌಟ್‌ರವರು ಮತದ ತಳಹದಿಯ ಮೇಲೆ ನಮ್ಮ ಶಿಕ್ಷಣ ಕ್ರಮವು ಕಟ್ಟಲ್ಪಟ್ಟಿದೆಯೆಂತಲೂ ಮತ್ತು ಅದಿಲ್ಲದಿದ್ದರೆ ನಿಜವಾದ ಸ್ಕೌಟ್ ಪದ್ಧತಿಗೆ ಹಾನಿಯುಂಟೆಂತಲೂ ಮೊದಲೇ ಹೇಳಿಬಿಟ್ಟಿದ್ದಾರೆ. ಈ ವಿಚಾರದ ನಿಜತ್ವವು ಸ್ಕೌಟ್ ಭ್ರಾತೃವರ್ಗದಲ್ಲಿ ಕೆಲಸ ಮಾಡುತ್ತಿರುವ ಎಲ್ಲರಿಗೂ ಈಗೀಗ ಚೆನ್ನಾಗಿ ತಿಳಿಯುತ್ತದೆಯಾದರೂ ಇನ್ನೂ ಹೆಚ್ಚು ಶ್ರದ್ಧೆಗೆ ಅವಕಾಶವಿದೆ. ಈ ಭಾತೃವರ್ಗದ ಮತೀಯ ದೃಷ್ಟಿಯು ಬಹಳ ವಿಸ್ತಾರವಾಗಿರುವುದರಿಂದ ಜನರಲ್ಲನೇಕರಿಗೆ ಇದರಲ್ಲಿ ಮತದ ಗಂಧವೇ ಇಲ್ಲವೆಂದೂ ಇದಕ್ಕೆ ಸೇರಿದವರಿಗೆ ಮತವಿಲ್ಲದಂತಾಗುವುದೆಂದೂ ತಪ್ಪು ಅಭಿಪ್ರಾಯಗಳು ಹುಟ್ಟಿರುವುದರಿಂದ ನಮಗೆ ದೊರಕಬೇಕಾದಷ್ಟು ಉತ್ತೇಜನವು ಈಗ ಲಭಿಸುತ್ತಿಲ್ಲ. ಈ ರೀತಿಯ ಅಭಿಪ್ರಾಯಗಳು ಹುಟ್ಟಲು ನಾವು ಮಾಡುವ ಕೆಲಸಗಳಲ್ಲಿ ಕೆಲವು ಕುಂದುಕೊರತೆಗಳಿರುವುದೂ ಒಂದು ಕಾರಣವಾಗಿದೆ. ನಮ್ಮಲ್ಲಿ ಈಗಲೂ

ಕೆಲವು ಹಿಂದುಗಳಲ್ಲಿ ಮತೀಯ ದೃಷ್ಟಿಯೇ ಇರುವುದಿಲ್ಲ.

ಮಕ್ಕಳಿಗಳಿಗೆ ಮತದಲ್ಲಿ ಆಸಕ್ತಿಯೇ ಇಲ್ಲ ವೆಂಬ ಕೆಟ್ಟ ಅಭಿಪ್ರಾಯವು ಬಹಳ ಕಾಲದ ವರೆಗೂ ಇತ್ತು. ಈಗಲೂ ಆಲೋಚನೆಯಲ್ಲಿ ಹಿಂದೆ ಬಿದ್ದಿರುವ ಕೆಲವರಿಗೆ ಅದೇ ಅಭಿಪ್ರಾಯವೇ ಇದೆ. ಒಟ್ಟನಲ್ಲಿ ಮಕ್ಕಳೊಡನಿದ್ದು ಮಕ್ಕಳನ್ನು ತಿಳಿದವರೆಲ್ಲರೂ ಅವರಿಗೆ ತಮ್ಮದೇ ಒಂದು ರೀತಿಯಲ್ಲಿ ಧರ್ಮಶ್ರದ್ಧೆ ಇದೆಯೆಂದು ಹೇಳುವರು. ದೊಡ್ಡ ದೊಡ್ಡ ಮಹಾಪುರುಷರೆಲ್ಲರೂ ಮಕ್ಕಳು ದೇವರಿಗೆ ಸಮಾನವೆಂದು ಹೇಳುತ್ತಾರೆ. ಯೇಸುಕ್ರಿಸ್ತನಾದರೋ ದೇವರ ರಾಜ್ಯವನ್ನು ಪ್ರವೇಶಿಸುವುದಕ್ಕೆ ಮಕ್ಕಳಿಗಿರುವ ಅಧಿಕಾರವು ಬೇರೆ ಯಾರಿಗೂ ಇಲ್ಲವೆಂದು ಹೇಳಿದ್ದಾನೆ. ನಾವು ಯಾವುದನ್ನು ತಪ್ಪು ಭಾವನೆಯಿಂದ ಮತವೆಂದು ಕರೆಯುತ್ತೇವೋ (ಬಾಹ್ಯಾಚರಣೆ) ಅಂಥಾದ್ದರಲ್ಲಿ ಅವರಿಗೆ ಆಸಕ್ತಿ ಕಡಮೆ. ಈ ಆಡಂಬವು ಅವರ ಮನಸ್ಸಿಗೆ ರಂಜನೆಯನ್ನುಂಟುಮಾಡದಿರುವುದೇನೂ ಆಶ್ಚರ್ಯವಲ್ಲ. ಆದರೂ ಅವರಲ್ಲಿ ನಿಜವಾದ ಮತ್ತು ಒಂದು ವಿಚಿತ್ರವಾದ ಮತವೂ ಮತ್ತು ಧರ್ಮಗಳೂ ಇವೆ. ಇವು ಅವರಿಗೆ ಅತ್ಯಂತ ಪ್ರೀತಿಪಾತ್ರವಾದವುಗಳೂ ಮತ್ತು ಅವರ ಸ್ವಭಾವಕ್ಕೆ ಹೊಂದಿಕೊಂಡವುಗಳೂ ಆಗಿರುತ್ತವೆ. ಅವುಗಳನ್ನು ಅವರ ರೀತಿಯನ್ನರಿಯದ ವೈದಿಕರ ಮುಂದೆ ವಿಜೃಂಭಣೆಯಿಂದ ಬೆಳಗಬೇಕೆಂಬ ಆಸೆಯು ಮಕ್ಕಳಿಗಿರುವುದಿಲ್ಲ. ಆದರೂ ಮತವು ಅಲ್ಲಿದ್ದೇ ಇರುವುದು. ಬಹಳ ವಾತ್ಸಲ್ಯದಿಂದಿರುವ ಹಿರಿಯ ತೋಳನಿಗೆ ಆಗಾಗ ಇದರ ಆಳವು ಸ್ವಲ್ಪಮಟ್ಟಿಗೆ ಕಣ್ಣಿಗೆ ಬೀಳುವುದು. ದೇವರು ಅವರಿಗೆ ಬಹಳ ನಂಬಿಕೆಯ ಸ್ನೇಹಿತ. ಅವನನ್ನು ಅವರು ಯಾವಾಗಲೂ ಜೊತೆಯಲ್ಲಿ ಕಟ್ಟಿಕೊಂಡೇ ತಿರುಗುವರು.

ಹಿಂಡಿನ ಕ್ರಮದಲ್ಲಿ ಮತದ ಸ್ಥಾನವು ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಮುಖ್ಯವಾದುದು. ಆದರೆ ಆಚರಿಸತಕ್ಕ ಮತ ಮತ್ತು ಮತಧರ್ಮಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಸಾಧನಗಳು ಮುಂತಾದವುಗಳಲ್ಲಿ ಹಿಂಡುಹಿಂಡಿಗೂ, ಮರಿಮರಿಗೂ ವ್ಯತ್ಯಾಸಗಳುಂಟು. ಈ ವಿಚಾರದಲ್ಲಿ ಏನನ್ನು ಮಾಡಿದರೂ ಭ್ರಾತೃವರ್ಗದ ಕಟ್ಟಳೆಗಳಿಗೆ ಅನುಸಾರವಾಗಿಯೇ ಮಾಡಬೇಕು.

ನಮ್ಮ ದೇಶದಲ್ಲಿ ಆಚರಣೆಯಲ್ಲಿರುವ ಭ್ರಾತೃವರ್ಗದ ಕಟ್ಟಳೆಗಳಲ್ಲಿ ಮೂರನೆಯ ಕಟ್ಟಳೆಯು ಈ ರೀತಿ ಹೇಳುತ್ತದೆ. "ಈ ಸಂಘವು ಯಾವ ಕೋಮುಗಳಿಗೂ ಸೇರಿದ್ದಲ್ಲ. ಪ್ರತಿಯೊಬ್ಬ ರೋವರ್, ಸ್ಕೌಟ್ ಮತ್ತು ಮರಿಯೂ ತನ್ನ ಮತದ ಆಚರಣೆಗಳನ್ನು ಪ್ರತಿದಿನವೂ ಆಚರಿಸುತ್ತಾನೆಂತಲೂ ಮತ್ತು ಇತರರ ಮತಾಚರಣೆಗೆ ಗೌರವಪೂರಿತವಾದ ಮರ್ಯಾದೆಯನ್ನು ಕೊಡುತ್ತಾನೆಂತಲೂ ನಿರೀಕ್ಷಿಸಲ್ಪಟ್ಟಿದೆ."

ಅಲ್ಲದೆ ಈ ಕೆಳಗೆ ಹೇಳುವ ಕಟ್ಟಳೆಗಳು ನಮ್ಮೆಲ್ಲರಿಗೂ ಅನ್ವಯಿಸುತ್ತವೆ.

(೧) ಭ್ರಾತೃವರ್ಗದ ಪ್ರತಿಯೊಬ್ಬನೂ ಯಾವುದಾದರೂ ಒಂದು ಮತಕ್ಕೆ ಸೇರಿರಬೇಕು ಮತ್ತು ಅದರ ವಿಧಿಗಳನ್ನು ಆಚರಿಸಬೇಕು.

(೨) ಒಂದು ಮಂಡಲದವರೆಲ್ಲರೂ ಒಂದೇ ಮತಕ್ಕೆ ಸೇರಿದವರಾಗಿದ್ದರೆ, ಅವರಿಗೆ ತಕ್ಕ ಪ್ರಾರ್ಥನೆ ಮೊದಲಾದ ಆಚರಣೆಗಳಿಗೂ ಮತ್ತು ಅವರಿಗೆ ತಕ್ಕ ಬೋಧನೆಗೂ ಆ ಮತದ ಅಧಿಕಾರಿಯೊಂದಿಗೆ ಯೋಚಿಸಿ ಯುಕ್ತವಾದ ವ್ಯವಸ್ಥೆಯನ್ನು ಮಂಡಲಾಧಿಕಾರಿಯು (Group Scout-master) ಮಾಡಬೇಕು.

(೩) ಒಂದು ಮಂಡಲದಲ್ಲಿ ಅನೇಕ ಉಪ ಪಂಗಡದವರು (Denominations) ಇದ್ದರೆ ಅವರವರ ಉಪಪಂಗಡಗಳಿಗೆ ಸಂಬಂಧಪಟ್ಟ ಪ್ರಾರ್ಥನಾದಿ ಆಚರಣೆಗಳನ್ನು ನಡೆಸುವಂತೆ ಮಾಡಬೇಕೇ ವಿನಹ ಒಟ್ಟುಗೂಡಿಸಿ ನಡೆಸಕೂಡದು. ಆದರೆ ಶಿಬಿರದಲ್ಲಿ ಸರ್ವಸಮ್ಮತವಾದ ಮತ್ತು ಸರಳವಾದ ದಿನಚರಿ ಪ್ರಾರ್ಥನೆಗಳು ಇರಬಹುದು. ಇವುಗಳ ಕಾಲದಲ್ಲಿ ಅದಕ್ಕೆ ಸೇರುವುದು ಅಥವಾ ಸೇರದಿರುವುದನ್ನು ಅವರವರಿಗೇ ಬಿಡಬೇಕು.

(೪) ಕಮಿಷನರಿಂದ ಅಪ್ಪಣೆ ಹೊಂದಿದ ಹೊರತು ಎಲ್ಲಾ ಪಂಗಡದವರನ್ನೂ ಒಟ್ಟುಗೂಡಿಸಿ ಮತೀಯ ಕಾರ್ಯಗಳನ್ನು ನಡೆಸಕೂಡದು. ಮತ್ತು ಯಾವ ಸಂದರ್ಭದಲ್ಲಿಯೂ ಸ್ಕೌಟ್ ಮಾಸ್ಟರಾಗಲಿ ಅಥವಾ ಇತರ ಅಧಿಕಾರಿಗಳಾಗಲಿ ಒಂದು ಪಂಗಡದವರ ದೇವಸ್ಥಾನಾದಿ ಪೂಜಾಸ್ಥಾನಗಳಿಗೆ ಇನ್ನೊಂದು ಪಂಗಡದವರು ಹೋಗಲೇಬೇಕೆಂತ ಬಲಾತ್ಕರಿಸಕೂಡದು.

ಇವೆಲ್ಲವನ್ನೂ ನಾವು ಮನಸ್ಸಿನಲ್ಲಿಟ್ಟದ್ದರೆ ಇವು ಬೇರೆ ಬೇರೆ ಪಂಗಡದವರಿಗೂ ಅನುಗುಣವಾಗುತ್ತವೆ. ಇವುಗಳಿಂದ ಸ್ಕೌಟ್ ಭ್ರಾತೃವರ್ಗದಲ್ಲಿ ಮತಕ್ಕೆ ಮುಖ್ಯವಾದ ಸ್ಥಾನವಿದೆಯೆಂಬುದು ಸ್ಪಷ್ಟವಾಗುತ್ತದೆ. ಎಲ್ಲಾ ವಿಚಾರಗಳೂ ಎಲ್ಲಾ ಮತದವರಿಗೂ ಅನ್ವಯಿಸುವಂತೆ ಬರೆಯಲು ಸಾಧ್ಯವಲ್ಲ. ಎಲ್ಲರಿಗೂ ಸಾಮಾನ್ಯವಾಗಿ ಯಾವ ವಿಚಾರಗಳು ಅನ್ವಯಿಸುವುವೋ ಅವುಗಳನ್ನು ಮಾತ್ರ ಬರೆಯಲು ಪ್ರಯತ್ನ ಮಾಡುತ್ತೇನೆ.

ಪ್ರತಿಯೊಬ್ಬ ಮರಿಯೂ ಮತ್ತು ಆಕೇಲನೂ ತನ್ನ ಮತಸಂಬಂಧವಾದ ಕರ್ತವ್ಯಗಳನ್ನು ಮಾಡಬೇಕೆಂಬುದು ಸಿದ್ಧಾಂತವಾಯಿತು. ಈ ವಿಚಾರದಲ್ಲಿ ಆಕೇಲನ ಆದರ್ಶದಿಂದ ಬಹಳ ಮಟ್ಟಿಗೆ ಹಿಂಡಿನ ಮೇಲೆ ಪರಿಣಾಮವುಂಟು. ಮರಿಗಳಿಗೆ ಎಲ್ಲಾ ಮತಗಳಿಗೂ ಸಾಮಾನ್ಯ ಧರ್ಮಗಳಾದ ಕೆಲವು ವಿಚಾರಗಳನ್ನು ಆಕೇಲನು ಬೋಧಿಸಬಹುದು. ಇದನ್ನು ಸರಿಯಾಗಿ ಮಾಡಬೇಕಾದಲ್ಲಿ ಆಕೇಲನಿಗೆ ಇತರ ಮತಗಳ ವಿಚಾರಗಳು ತಿಳಿದಿರಬೇಕು. ಹಾಗಿಲ್ಲದ ಪಕ್ಷದಲ್ಲಿ ಈ ಕೆಲಸಕ್ಕೆ ಕೈಹಾಕಬಾರದು. ಕ್ರೈಸ್ತ ಹುಡುಗರಿದ್ದರೆ ಅವರು ಭಾನುವಾರ ಅವರ ದೇವಸ್ಥಾನಕ್ಕೆ ಹೋಗುವಂತೆ ಹೇಳಬೇಕು. ಮತ್ತು ಹಾಗೆಯೇ ಇತರಪಂಗಡದವರಿಗೂ ಅವರವರ ಮತಕ್ಕೆ ತಕ್ಕ ಆಚರಣೆಗಳನ್ನು ಮಾಡುವಂತೆ ಹೇಳಬೇಕು.

ಮತದ ವಿಚಾರದಲ್ಲಿ ಹಿಂಡಿನ ಕ್ರಮವು ಮಾಡಬೇಕಾದ ಕೆಲಸವು ಇಷ್ಟೇ ಅಲ್ಲ. ಮತವೆಂಬುದು ಮರಿಯ ಜೀವನಕ್ಕೆ ಸಂಬಂಧ ಪಡುವಂತೆ ಮಾಡುವುದೂ ಮತ್ತು ಮತ ಧರ್ಮವು ಮಾಡುವ ಕೆಲಸಗಳಲ್ಲಿ ಆಚರಣೆಗೆ ಬರುವಂತೆ ಮಾಡುವುದೂ ಬಹಳ ಮುಖ್ಯವಾದ ಕೆಲಸ. ಮತವೆಂಬುದು ಬಾಹ್ಯಾಚರಣೆಗಳು ಮತ್ತು ತತ್ವಗಳು ಇವೆಲ್ಲಕ್ಕೂ ಮೀರಿದುದು. ಅದು ಜೀವಮಾನದ ಒಂದು ರೀತಿ. ದೇವರ ವಿಚಾರದಲ್ಲಿ ಸದಾ ಇರಬೇಕಾದ ಒಂದು ಭಾವನೆ ಮತ್ತು ನಮ್ಮ ದಿನಚರಿಯ ಆಚರಣೆಗಳ ಕಡೆಗೆ ಇರುವ ಒಂದು ದೃಷ್ಟಿ. ಬಾಹ್ಯಾಚರಣೆಗಳಿಗೆ ಮಾತ್ರ ಪ್ರಾಮುಖ್ಯತೆಯನ್ನು ಕೊಟ್ಟರೆ ಮತವು ಅನಿತ್ಯವಾಗುತ್ತದೆ. ಮತವು ಮರಿಯ ಇಡೀ ಜೀವಮಾನಕ್ಕೂ ಮತ್ತು ಜೀವಮಾನದ ಪ್ರತಿಯೊಂದು ಕ್ಷಣಕ್ಕೂ ಸಂಬಂಧಿಸಿರಬೇಕು. ಅದು ನಮ್ಮ ಶಿಕ್ಷಣದ ಪ್ರತಿಯೊಂದು ಶಾಖೆಯಲ್ಲಿಯೂ ಮತ್ತು ಮರಿಯ ಜೀವನದ ಪ್ರತಿಯೊಂದು ಅಂಗುಲದಲ್ಲಿಯೂ ತುಂಬಿರಬೇಕು.

ಆರನೇ ಅಧ್ಯಾಯದ ೨ನೆಯ ಪ್ರಕರಣದಲ್ಲಿ ಹೇಳಿರುವ ನಾಲ್ಕು ಅಂಶಗಳನ್ನು ನಾವು ಪುನಃ ಜ್ಞಾಪಕಕ್ಕೆ ತಂದುಕೊಂಡರೆ ಈ ವಿಚಾರದಲ್ಲಿ ನಮ್ಮ ಕರ್ತವ್ಯವೇನೆಂಬುದೂ ಅದನ್ನು ಹೇಗೆ ನೆರವೇರಿಸಬೇಕೆಂಬುದೂ ನಮಗೆ ಗೊತ್ತಾಗುವುದು.

ಇವುಗಳಲ್ಲಿ ಮೊದಲನೆಯದು ಆಕೇಲನ ಸ್ವಂತ ನಡತೆ ಮತ್ತು ಮೇಲ್ಪಂಜ್ತಿ. ಇದನ್ನನುಸರಿಸಿಯೇ ಉಳಿದುದೆಲ್ಲಾ ನಡೆಯುತ್ತದೆ. ಆಕೇಲನ ನಡತೆ ಮತ್ತು ಉದಾಹರಣೆಯಿಂದ ಹಿಂಡಿನ ಮೇಲೆ ಆಗುವ ಪರಿಣಾಮವನ್ನು ನೋಡಿದರೆ ಈ ವಿಚಾರವನ್ನು ಎಷ್ಟು ಸಾರಿ ಒತ್ತಿ ಹೇಳಿದರೂ ತೀರದು. ನಮ್ಮ ಪ್ರತಿಯೊಂದು ಮಾತು, ಪ್ರತಿಯೊಂದು ಕೆಲಸ—ನಾವು ಮರಿಗಳಿಗೆ ಹೇಳುವುದು, ಬೋಧನೆ ಮಾಡುವುದು, ಅವರೊಂದಿಗೆ ಸೇರಿ ಮಾಡುವ ಕೆಲಸ; ಇಷ್ಟೇ ಅಲ್ಲದೆ ಹಿಂಡಿನಿಂದ ಹೊರಗೆ ನಾವು ಮಾಡುವ ಕೆಲಸ—ಇವೆಲ್ಲವುಗಳಿಂದಲೂ ಹಿಂಡಿನ ಮೇಲೆ ಒಳ್ಳೆಯ ಅಥವಾ ಕೆಟ್ಟ ಪರಿಣಾಮವುಂಟೆಂಬ ಸತ್ಯಾಂಶವನ್ನು ನಾವು ಮೊದಲು ತಿಳಿಯಬೇಕು. ಅವು ಮರಿಗಳ ಆತ್ಮಸಾಕ್ಷಾತ್ಕಾರಕ್ಕೆ ಅನುಕೂಲವನ್ನಾಗಲಿ ಪ್ರತಿಕೂಲವನ್ನಾಗಲಿ ಉಂಟುಮಾಡುತ್ತವೆ. ಈ ರೀತಿಯಲ್ಲಿ ಯೋಚಿಸಿದರೆ ನಮಗೆ ಹೆದರಿಕೆಯಾಗಬಹುದು. ಆದರೂ ಹಿಮ್ಮೆಟ್ಟುವುದರಿಂದ ಪ್ರಯೋಜನವಿಲ್ಲ. ಆ ಜವಾಬ್ದಾರಿಯು ಇದ್ದೇ ಇರುತ್ತದೆ. ಈ ಕಷ್ಟವನ್ನು ನಾವು ಧೈರ್ಯದಿಂದ ಒಂದು ಸಾರಿ ಎದುರಿಸಿದರೆ ನಮ್ಮ ಉದ್ದೇಶವು ಯೋಗ್ಯವಾಗಿದ್ದ ಪಕ್ಷದಲ್ಲಿ ನಮಗೆ ಮುಂದೆ ಕಷ್ಟತೋರುವುದಿಲ್ಲ. ನಾವು ಮಾಡುವ ಕೆಲಸ ಮತ್ತು ಆಡುವ ಮಾತುಗಳಿಂದ ಮರಿಗಳ ಮೇಲೆ ಪರಿಣಾಮವಿರುವುದು ನಿಜವಾದುದರಿಂದ ನಾವು ನಮ್ಮ ಮತತತ್ವಗಳನ್ನು ನಮ್ಮ ದಿನಚರಿಯಲ್ಲಿ ಆಚರಣೆಗೆ ತಂದರೆ ಮರಿಯ ಮತದ ವಿಚಾರದಲ್ಲಿ ನಮ್ಮ ಉದ್ದೇಶವು ಸಫಲವಾಗುವುದು ನಿಜ. ತಾನು ಬಹಳ ನಿಷ್ಠನೆಂದು ಬೂಟಾಟಿಕೆ ತೋರಿಸಬೇಕಾದುದಿಲ್ಲ. ಮತ್ತು ಆ ವಿಚಾರದಲ್ಲಿ ಜಂಭ ಹೊಡೆದು ಕೊಳ್ಳಬೇಕಾದುದೂ ಇಲ್ಲ. ಹೀಗೆ ಮಾಡುವುದರಿಂದ ಬಹಳ ಕೇಡುಂಟಾಗುವುದು. ನಮ್ಮ ಮರಿಗಳ ಮುಂದೆ ನಾವಿಡುವ ಧ್ಯೇಯಗಳಿಗೆ ಸರಿಯಾಗಿ ನಾವು ಸರಳತೆಯಿಂದಲೂ ಸ್ವಾಭಾವಿಕವಾಗಿಯೂ ನಡೆಯಲು ನಮ್ಮ ಕೈಲಾದ ಮಟ್ಟಿಗೆ ಪ್ರಯತ್ನಮಾಡಬೇಕು. ಪುನಃ ನಾವು ಹಿಂದೆ ಹೇಳಿದ ವಿಚಾರಕ್ಕೇ ಬರುತ್ತೇವೆ. ತಾಯಿಯಂತೆ ಮಕ್ಕಳು ಎನ್ನುವ ಹಾಗೆ ಆಕೇಲನಂತೆ ಮರಿಯೂ ಆಗುತ್ತಾನೆ. ಆಕೇಲನಲ್ಲಿ ಅದ್ಭುತಕಲ್ಪನಾ ಶಕ್ತಿಯಿದ್ದರೆ ಮರಿಗೂ ಅದು ಬರುತ್ತದೆ.. ಆಕೇಲನು ಹಸನ್ಮುಖಿಯಾಗಿದ್ದರೆ ಮರಿಯು ನಗುತ್ತಿರಬೇಕೆಂದು ಹೇಳಬೇಕಾದ ಅವಶ್ಯಕತೆಯೇ ಇಲ್ಲ. ಆಕೇಲನು ಮತವೆಂಬುದನ್ನು ತನ್ನ ಜೀವನದ ಹಾದಿಯನ್ನಾಗಿ ಮಾಡಿಕೊಂಡರೆ ಮರಿಯ ಮತೀಯ ಅಭ್ಯುದಯಕ್ಕೆ ಅದು ಖಂಡಿತವಾಗಿ ಸಹಾಯಮಾಡುತ್ತದೆ.

ಎರಡನೆಯದು ಹಿಂಡಿನ ಸಾಂಘಿಕ ಜೀವನದ ಶಿಸ್ತು. ಇದು ಬಹಳಗಹನವಾದ ವಿಚಾರ. ನಮ್ಮ ಪ್ರತಿಯೊಂದು ಕೆಲಸವೂ ಯಾವುದಾದರೂ ಒಂದು ಫಲರೂಪವಾಗಿ ಪರಿಣಮಿಸುತ್ತದೆಂಬುದನ್ನು ನಾವು ನಂಬಿದರೆ ಎಷ್ಟು ಸಣ್ಣ ವಿಚಾರವೂ ಅಗಣ್ಯವಲ್ಲ. ಈ ವಿಚಾರದಲ್ಲಿ ಹೆಚ್ಚು ಸೂಕ್ಷ್ಮವಾಗಿ ವಿಮರ್ಶೆ ಮಾಡಲು ಅವಕಾಶವಿಲ್ಲವಾಗಿ ಯಾವವು ಅನುಕೂಲವಾದ ರೀತಿಗಳೆಂಬುದು ನನ್ನ ಅನುಭವಕ್ಕೆ ಬಂದಿವೆಯೋ ಅವುಗಳನ್ನು ಮಾತ್ರ ವಿವರಿಸುತ್ತೇನೆ.

ಇವುಗಳಲ್ಲಿ ಪ್ರಾರ್ಥನೆಯು ಒಂದಾಗಿದೆ. ಹಿಂಡುಕೂಡುವಾಗಲೆಲ್ಲಾ ಪ್ರಾರ್ಥನೆಯಿರಬೇಕು. ಮುಖ್ಯಸಂಸ್ಕಾರಗಳ ಕಾಲದಲ್ಲಿ ಅದರಲ್ಲಿಯೂ ವಿಶೇಷವಾಗಿ ದೀಕ್ಷೆ ಮತ್ತು ಆರೋಹಣ ಸಂಸ್ಕಾರಗಳ ಕಾಲದಲ್ಲಿ ಪ್ರಾರ್ಥನೆಯಿರಲೇ ಬೇಕು. ಹಿಂಡಿನವರೆಲ್ಲರೂ ಒಟ್ಟಿಗೆ ಸೇರಿ ಹೇಳುವುದಕ್ಕಾಗುವಂಥ (ಎಲ್ಲಾ ಮತಗಳವರಿಗೂ ಮತ್ತು ಎಲ್ಲಾ ಪಂಗಡದವರಿಗೂ ಅನ್ವಯಿಸುವಂಥವುಗಳಾಗಿರಬೇಕು. ಅವು ದೇವರ ಮಹಿಮೆಯನ್ನು ಕೊಂಡಾಡುವಂಥವುಗಳಾಗಿರಬೇಕು. ಅವತಾರಗಳ ವಿಚಾರಗಳು ಬರಬಾರದು) ಪ್ರಾರ್ಥನೆಗಳಿರಬೇಕು. ಅದರಲ್ಲಿ ಯಾವುದಾದರೂ ಒಂದನ್ನು ಹಿಂಡಿನ ಪ್ರಾರ್ಥನೆಯೆಂದು ಇಟ್ಟುಕೊಳ್ಳಬಹುದು. ಇದನ್ನು ಮರಿಗಳು ಪ್ರತಿದಿನವೂ ಬೆಳಿಗ್ಗೆ ಏಳುತ್ತಲೂ ಮತ್ತು ರಾತ್ರಿ ನಿದ್ರೆಮಾಡುವುದಕ್ಕೆ ಮುಂಚೆಯೂ ಶಿಬಿರದಲ್ಲಿ ಮಾತ್ರವಲ್ಲದೆ ಮನೆಯಲ್ಲಿಯೂ ಹೇಳುವಂತೆ ಮಾಡುವುದು ಒಳ್ಳೆಯದು. ಹೀಗೆ ಮಾಡುವುದರಿಂದ ಮರಿಗಳ ತಂದೆತಾಯಿಗಳಿಗೂ ಹಿಂಡಿನಲ್ಲಿ ಮತೀಯ ವಿಚಾರಗಳಿಗೆ ಗಮನ ಕೊಡುತ್ತಾರೆಂಬುದು ತಿಳಿಯುವುದಲ್ಲದೆ ಅವರಿಗೆ ಹಿಂಡಿನಲ್ಲಿ ಆಸಕ್ತಿಯನ್ನೂ ದೇವರಲ್ಲಿ ಭಕ್ತಿಯನ್ನೂ ಹುಟ್ಟಿಸಲು ಸಹಕಾರಿಯಾಗುತ್ತದೆ. ಈ ಪ್ರಾರ್ಥನೆಗಳು ಬಹಳ ಸುಲಭವಾಗಿದ್ದು ಮರಿಗಳಿಗೆ ಅರ್ಥವಾಗುವಹಾಗಿರಬೇಕು.

ಪರೋಪಕಾರಕ್ಕೆ ಸಂಬಂಧಿಸಿದ ಪದಕಗಳನ್ನು ಪಡೆಯಲು ಸಹಾಯ ಮಾಡುವ ಪರಿಕ್ಷಾಂಶಗಳ ಕಡೆಗೆ ನಮ್ಮ ಗಮನವನ್ನು ತಿರುಗಿಸುವುದು ಇನ್ನೊಂದು ವಿಧಾನ. ಈ ಪದಕಗಳನ್ನು ಸಂಪಾದನೆ ಮಾಡುವುದೂ ಪರೋಪಕಾರಕ್ಕಾಗಿಯೇ ಎಂಬುದನ್ನುಮರಿಯು ತಿಳಿದುಕೊಳ್ಳಬೇಕು. ಮರಿಯುಪಡೆಯುವ ಮೊದಲನೆಯ ಪ್ರವೀಣತೆಯ ಪದಕವು (Proficiency Badge) "ಸೇವೆ" ಎಂಬ ಗುಂಪಿಗೆ ಸೇರಿದ್ದಾಗಿರಬೇಕೆಂದು ಒಂದು ನಿಯಮವನ್ನು ಹಿಂಡಿನಲ್ಲಿ ಮಾಡಿಕೊಳ್ಳಬಹುದು. ಅದರಂತೆಯೇ ಒಂಟಿಯಾಗಿ ಮತ್ತು ಹಿಂಡಿನಲ್ಲಿ ಸೇರಿ ಮಾಡುವ ಪರೋಪಕಾರದ ಮೇಲೆ ಹೆಚ್ಚು ಅವಧಾರಣೆಯಿಡಬೇಕು. (ಸದಾ ಪರೋಪಕಾರ ಮಾಡುವ ಬುದ್ಧಿಯುಂಟಾದಲ್ಲಿ ಮತಧರ್ಮವು ಸಾಕ್ಷಾತ್ಕಾರವಾದಂತೆಯೇ ಆಗುವುದು.)

ಶಿಸ್ತಿನ ವಿಚಾರದಲ್ಲಿ ಮರಿಯು ಮಾಡುವ ಭಾಷೆಯ ಮೊದಲನೆಯ ಭಾಗವನ್ನು ಅವನಿಗೆ ತಿಳಿಯುವಂತೆ ಹೇಳಿಕೊಡುವುದಕ್ಕೆ ಸ್ವಲ್ಪ ಶ್ರಮವನ್ನು ತೆಗೆದುಕೊಳ್ಳಬೇಕು. ಮೊದಲನೆಯ ಭಾಗವು ಸ್ಥಾನದಲ್ಲಿ ಮಾತ್ರವಲ್ಲದೆ ಪ್ರಾಮುಖ್ಯತೆಯಲ್ಲಿಯೂ ಮೊದಲನೆಯದೆಂದು ಅವನಿಗೆ ಗೊತ್ತಾಗಬೇಕು. ಮಿಸ್. ಬಾರ್ಕ್ಲೆಯವರು ತಮ್ಮ "ಕಾಡಿನ ಜ್ಞಾನ" (Jungle Wisdom) ಎಂಬ ಪುಸ್ತಕದಲ್ಲಿ ಕೊಟ್ಟಿರುವ ಸೂಚನೆಯಂತೆ ನಡೆಸಬೇಕು. ಮರಿಯು ಭಾಷೆಯನ್ನುಆಕೇಲನಿಗೆ ಕೊಡುತ್ತಿದ್ದರೂ ನಿಜವಾಗಿಯೂ ಅವನು ಎಲ್ಲರಿಗಿಂತಲೂ ದೊಡ್ಡ ಆಕೇಲ(ಅದ್ವಿತೀಯ ಎಂದರ್ಥ)ನಾದ ದೇವರಿಗೆ ತಾನು ಭಾಷೆ ಕೊಡುತಿದ್ದಾನೆಂಬುದನ್ನು ಅವನಿಗೆ ಹೇಳಬೇಕು. ಮತ್ತು ಅವನು ಮರಿಯಾಗಿ ಹಿಂಡಿನ ನಿಯಮಗಳಿಗನುಸಾರವಾಗಿ ನಡೆಯುವನೋ ಇಲ್ಲವೋ ಎಂಬುದನ್ನು ದೇವರು ನೋಡುತ್ತಿರುತ್ತಾನೆಂದೂ ಮತ್ತು ಪ್ರತಿಯೊಬ್ಬ ಮರಿಯ ಮೇಲೂ ದೇವರಿಗೆ ಬಹಳ ಪ್ರೀತಿಯೆಂತಲೂ ಹೇಳಬೇಕು. ಇದು ಅವನ ಮನಸ್ಸಿಗೆ ಹಿಡಿಯಬೇಕಾದರೆ ದೇವರು ಪ್ರೀತಿಮಯನೆಂಬ ಅಭಿಪ್ರಾಯವು ಅವನ ಮನಸ್ಸಿನಲ್ಲಿ ಬರುವಂತೆ ಮಾಡಬೇಕು.

ಶಿಸ್ತಿನ ವಿಚಾರವೂ ಹಾಗೆಯೇ. ಮರಿಗಳೆಲ್ಲರೂ ಆಕೇಲನ ಪ್ರೀತಿಗೆ ಪಾತ್ರರಾಗುವುದಕ್ಕಾಗಿ ಶಿಸ್ತಿನಿಂದ ನಡೆಯುತ್ತಾರೆ. ಈ ಆಕೇಲರ ವಿಷಯದಲ್ಲೇ ಇಷ್ಟು ಶಿಸ್ತಿನಿಂದ ನಡೆಯುವಾಗ ದೊಡ್ಡ ಆಕೇಲನಾದ ದೇವರ ವಿಚಾರದಲ್ಲಿ ಎಷ್ಟು ಶಿಸ್ತಿನಿಂದ ನಡೆಯಬೇಕೆಂಬ ಭಾವನೆಯು ಅವರ ಮನಸ್ಸಿನಲ್ಲಿ ಬರುವಂತೆ ಮಾಡಬೇಕು. ದೇವರ ಮೇಲಿರುವ ಪ್ರೀತಿಯೇ ಶಿಸ್ತಿಗೆ ಕಾರಣವೆಂಬ ಅಭಿಪ್ರಾಯವು ಅವರ ಮನಸ್ಸಿನಲ್ಲುಂಟಾಗುವಂತೆ ಮಾಡಬೇಕು. ಉದಾಹರಣೆಗಾಗಿ ಒಬ್ಬ ಮರಿಯು ಏನಾದರೂ ತಪ್ಪು ಮಾಡಿದಾಗ ತನಗೆ ತಾನು ಸೋತುಹೋಗಿ "ಭಾಷೆ" ಗೆ ತಪ್ಪಿದುದರಿಂದ ದೊಡ್ಡ ಆಕೇಲನಾದ ದೇವರಿಗೆ ವ್ಯಸನವುಂಟಾಯಿತೆಂತಲೂ ಮತ್ತು ಅವನು "ಭಾಷೆ"ಗೆ ಸರಿಯಾಗಿ ನಡೆದರೆ ದೇವರಿಗೆ ಪ್ರೀತಿಯುಂಟಾಗುವುದೆಂತಲೂ ಹೇಳಬಹುದು.

ಭೀಲ್.

(ಮುಂದುವರಿಯುವುದು)

Price List of Books, Badges & Photographs.

Available at the Scout Headquarters, Fort, Bangalore City.

Each	Rs.	A.	P.
Badges-Rovers—Rover Pin ...	0	6	0
Rover Badge ...	0	4	0
Scouts—Tenderfoot (metal) ...	0	2	0
P. L. ...	0	2	0
II Class ...	0	2	0
I Class ...	0	4	0
Scoutmaster's ...	0	4	0
A. S M's ...	0	4	0
Maharaja's Badge ...	0	8	0
Commissioner's ...	0	8	0
Assistant Commissioner's ...	0	8	0
Proficiency ...	0	2	0
Star ...	0	2	3
Silk Cord I ...	0	12	0
Silk Cord II and III ...	0	6	0
Cubs—Tenderpad (metal) ...	0	1	6
Proficiency ...	0	1	6
Books—Kannada Handbook for Scouts	0	8	0

Each	Rs.	A.	P.
Scout's Comrade (Urdu)	0	5	0
Hints to Scoutmasters (Kannada)	0	3	0
Patrol Leaders' Record Book	0	1	0
Rashtrageethegalu (same as Scout Geetagalu but abridged)	0	2	0
Tenderfoot Tests and How to Pass Them	0	1	6
1st class Tests in Kannada	0	3	0
2nd do	0	2	6
Cubbing in Urdu ...	0	12	0
Scouting in India by Mr. C. Subba Rau, M.A., (Hons.)	1	4	0
Photographs—H. H. the Chief Scout's Photo (small size)	0	2	0
H. H. the Chief Scout & Chief Cub together (small size)	0	2	0
ಹಾಡಿನ ಚಿಲುಮೆ Hadinachuilume ...	0	6	0
do Antiqre paper ...	0	8	0

N.B.—Badges are meant only for the Boy Scouts of Mysore. Postage extra.

Editorial Committee's Notice.

1. The Editors request all Scouts, Scouters and others interested in Scouting to patronise THE MYSORE SCOUT by becoming subscribers, by contributing articles and by sending information of Scout doings.

Articles etc., intended for publication in THE MYSORE SCOUT should be type-written or written in a clear, legible hand on one side of the paper only and sent not later than the 20th of any month. They should bear the signatures and complete addresses of the authors; names of authors will be printed with the title of their contributions, unless it is specifically desired that pen-names be emplcyed.

The Editors reserve to themselves the full right of approving and rejecting articles etc., sent for publication, and their decision on the question is final. They have also the right of suggesting to the authors alteration and deletion of parts here and there.

The Editors do not promise that the articles etc., received at any time will appear in the very next issue of THE MYSORE SCOUT; they will, however, try to publish them as soon as possible.

Articles etc., disapproved shall not be sent back unless the authors make proper arrangements for such transaction at the very beginning.

The Editors are not at all responsible for the opinions expressed by their correspondents and writers of articles.

3 To those that send news of the activities of Troops, Crews and Groups, the Editors wish to make a particular appeal that they would kindly make the narratives and descriptions fully Scoutlike.

4. Sketches and photographs forwarded for publication will be thankfully received. The Editors, however, do not guarantee the publication or return of any of them. But all blocks sent for the Editors' use will be returned.

5. For all correspondence relating to articles, photographs etc., please address:—

THE EDITOR,
MYSORE SCOUT, The Boy Scout Headquarters,
Irwin Circle, Bangalore City.

"BE PREPARED"

FOR THE FUTURE BY

Taking out immediately a Policy of Life Assurance

WITH

The Mysore Govt. Life Insurance Committee

PUBLIC BRANCH

The best Institution for a Mysorean to insure his life.



MYSORE STATE LIFE INSURANCE OFFICE, BANGALORE

It helps to inculcate the habits of Thrift, Self-Help and other ideals, precious to every Scout.

Bonus last Declared :—Rs. 20 per thousand per annum.

NEXT BONUS YEAR — 1938.

Please apply for particulars :—

THE SECRETARY,

Mysore Government Life Insurance Committee

Bangalore.

Printed at The Power Printing Works, Chickpet, Bangalore City by N. Krishnaswami Rao, Proprietor.